ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷಣೆಯವರೆ, ಈ ಸದನದ ಮುಖಾಂತರ ಪ್ರತಿಭಟನೆಯನ್ನಾದರೂ ಸಲ್ಲಿಸೋಣ.

ಶ್ರೀ ವಾಟಾಳ್ ನಾಗರಾಜ್ : ಕೇಂದ್ರ ಸರ್ಕಾರದ ರೈಲ್ವೆ ಧೋರಣೆ, ಕರ್ನಾಟಕದ ಮೇಲೆ ಅವರು ತಾಳುತ್ತಿರುವ ಮಲತಾಯಿ ಧೋರಣೆ ಮತ್ತು ಅವರ ನೀತಿ ವಿರುದ್ಧ ನಾನು ತೀವ್ರವಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದೇನೆ.

ಉಪಾಧ್ಯಕ್ಷರು : ಇದು ಕೇಂದ್ರ ಸರ್ಕಾರದ ಒಂದು ವಿಷಯ ಅದಿನ್ನೂ ಬರುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಸದನದ ಮುಖಾಂತರ ಪ್ರತಿಭಟನೆಯನ್ನು ಸಲ್ಲಿಸೋಣ.

ಉಪಾಧ್ಯಕ್ಷರು : ಅದಿನ್ನೂ ಬರುತ್ತಿದೆ. ಈಗ ಕೋಳಿವಾಡ್ ಅವರು..

ಶ್ರೀ ವಾಟಾಳ್ ನಾಗರಾಜ್ : ನಮಗೆ ಚಾಮರಾಜನಗರ ಮೆಟ್ಟುಪಾಳ್ಯ ರೈಲು ಇಲ್ಲ, ಬ್ರಾಡ್‌ಗೇಜ್ ಇಲ್ಲ, ಕನ್ನಡಿಗರಿಗೆ ಉದ್ಯೋಗ ಇಲ್ಲ, ರೈಲ್ವೆ ಇಲಾಖೆಯಲ್ಲಿ ನಮ್ಮನ್ನು ಕೇಳುವವರು ಗತಿ ಇಲ್ಲ, ಕೇಂದ್ರದ ಈ ನೀತಿಯ ವಿರುದ್ಧ ಪ್ರತಿಭಟಿಸಿ ಧರಣಿ ಮಾಡುತ್ತಿದ್ದೇನೆ ನಾನು. ಇದು ಸರಿಯಿಲ್ಲ, ಸಭೆ ನಡೆಸುತ್ತಿದ್ದೇವೆ. ಈ ಬಗ್ಗೆ ಇಲ್ಲಿ ಸರ್ಕಾರ ಒಂದು ನಿರ್ಣಯ ಮಾಡಬೇಕು.

ಉಪಾಧ್ಯಕ್ಷರು : ಅಲ್ಲಿ ರೈಲ್ವೆ ಬಜೆಟ್ ಇನ್ನೂ ಪೂರ್ಣ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ನೋಡಿಕೊಂಡು ಬಂದೆ. ಒಂದು ನಯಾಪೈಸೆ ಅನುಕೂಲವೂ ಇಲ್ಲ. ಕೇಂದ್ರದ ವಿರುದ್ಧ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಒಂದು ನಿರ್ಣಯ ಮಾಡಬೇಕು ಈ ಸಭೆಯಲ್ಲಿ ಅನ್ಯಾಯ ಮಾಡಿದ್ದಾರೆ ಎಂದು.

ಉಪಾಧ್ಯಕ್ಷರು : ಈಗ ಶ್ರೀಯುತ ಕೋಳೀವಾಡ್ ಅವರು...

(ಶ್ರೀ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತಿದ್ದರು)

ಶ್ರೀ ಕೆ.ಬಿ. ಕೋಳೀವಾಡ್ : ಸನ್ಮಾನ್ಯ ಅಧ್ಯಕ್ಷಿಣಿಯವರೆ,..

ಶ್ರೀ ಕೆ.ಎಸ್. ಈಶ್ವರಪ್ಪ : ರಾಜ್ಯದ ಜನತೆ ಪರವಾಗಿ ಕೇಂದ್ರ ಸರ್ಕಾರ ಮಾಡಿರುವ ಅನ್ಯಾಯವನ್ನು ಪ್ರತಿಭಟನೆ ಮಾಡಬೇಕು.

ಉಪಾಧ್ಯಕ್ಷರು : ಕೋಳೀವಾಡ್ ಅವರೇ, ತಾವು ನಿರ್ಣಯ ಮೂವ್ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಪ್ರತಿಭಟನೆ ತೋರಿಸೋಣ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣ ಪ್ರಸ್ತಾವ

+ ಶ್ರೀ ಕೆ.ಬಿ. ಕೋಳೀವಾಡ್ (ರಾಣಿಬೆನ್ನೂರು) : ಮಾನ್ಯ ಅಧ್ಯಕ್ಷಿಣಿಯವರೆ, ಫೆಬ್ರವರಿ 21, 1992ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ಮಾನ್ಯ ರಾಜ್ಯ ಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭಾ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಲು ತಮ್ಮ ಅಪ್ಪಣೆ ಕೋರುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಮಾನ್ಯ ಕೋಳಿವಾಡ್ ಅವರು ಸೂಚಿಸಿದ ರಾಜ್ಯಪಾಲರ ವಂದನಾ ನಿರ್ಣಯದ ಪ್ರಸ್ತಾಪವನ್ನು ನಾನು ಅನುಮೋದಿಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ರಾಜ್ಯದವರೇ ರೈಲ್ವೇ ಮಂತ್ರಿಗಳು ಆಗಿದ್ದರೂ ನಮ್ಮ ರಾಜ್ಯಕ್ಕೆ ಏನೂ ಅನುಕೂಲ ಆಗಿಲ್ಲವಾದ್ದರಿಂದ ಇಲ್ಲಿ ಪ್ರತಿಭಟನೆ ಸೂಚಿಸಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿಯೇ ಇದ್ದಾರೆ. ಅವರು ಏನಾದರೂ ಹೇಳಬೇಕು. ಬನ್ನಿ ವಾಟಾಳ್ ನಾಗರಾಜ್‌ರವರೇ.

ಶ್ರೀ ವಾಟಾಳ್ ನಾಗರಾಜ್ : ನಾನು ಪ್ರತಿಭಟನೆ ಮಾಡುತ್ತಿದ್ದೇನೆ. ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಾಟಾಳ್ ನಾಗರಾಜ್‌ರವರೇ, ನಾವೂ ಕೂಡ ನಿಮ್ಮ ಜೊತೆ ಇದ್ದೇವೆ. ನಿಮ್ಮ ಪ್ರತಿಭಟನೆಗೆ ನಮ್ಮ ಸಂಪೂರ್ಣ ಸಮ್ಮತಿ ಇದೆ. ನಿಮ್ಮ ಮಾತಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ.

ಉಪಾಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ತಾವು ತಮ್ಮ ಸ್ಥಾನಕ್ಕೆ ಹೋದರೆ ಸಭೆಯ ಕಲಾಪವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ.ಹೆಚ್. ಬನ್ನೀಕೋಡ್ : ಮಾನ್ಯ ವಾಟಾಳ್‌ನಾಗರಾಜ್‌ರವರ ಅಭಿಪ್ರಾಯ ಈ ಸದನದ ಎಲ್ಲಾ ಸದಸ್ಯರ ಅಭಿಪ್ರಾಯವಾಗಿದೆ. ರಾಜ್ಯಕ್ಕೆ ಅನ್ಯಾಯ ಆಗಿದೆ ಎಂದು ಎಲ್ಲಾ ಮಾನ್ಯ ಸದಸ್ಯರು ಕಳವಳ ವ್ಯಕ್ತ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಕರ್ನಾಟಕಕ್ಕೆ ಕರ್ನಾಟಕದ ಅಭಿವೃದ್ಧಿಗೆ ಆಗಬೇಕಾದ ರೈಲ್ವೆ ಅಭಿವೃದ್ಧಿ ಕೆಲಸವನ್ನು ಬಡ್ಜೆಟ್‌ನಲ್ಲಿ ತೆಗೆದುಕೊಳ್ಳಬೇಕೆಂದು, ಆ ಬಗ್ಗೆ ತ್ವರಿತ ಗಮನ ಹರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಈ ಸದನದ ಮೂಲಕ ಒಂದು ಸರ್ವಾನುಮತದ ನಿರ್ಣಯವನ್ನು ಕಳುಹಿಸಿಕೊಡಬೇಕೆಂದು ಹೇಳುತ್ತೇನೆ. ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಬರಬೇಕೆಂದು ಹೇಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಇದನ್ನು ಸರ್ಕಾರವೇ ಮೂವ್ ಮಾಡಲಿ. ಅದರಲ್ಲಿ ತಪ್ಪು ಏನು ಇದೆ ?

ಶ್ರೀ ಬಿ.ಹೆಚ್ ಬನ್ನೀಕೋಡ್ : ಸದನದಲ್ಲಿ ಒಟ್ಟಾಭಿಪ್ರಾಯ ಮಾಡಿ ಕೇಂದ್ರಕ್ಕೆ ಕಳುಹಿಸಿಕೊಡೋಣ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಇಲ್ಲಿ ಹೇಳಲಿ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷಿಣಿಯವರೇ, ಕರ್ನಾಟಕಕ್ಕೆ ಇನ್ನೂ ಹಲವಾರು ಭಾಗಗಳಲ್ಲಿ ರೈಲು ಮಾರ್ಗಗಳು ಬೇಕು ಎನ್ನುವ ಒತ್ತಡವನ್ನು ಹಲವಾರು ವರ್ಷಗಳಿಂದ ತಂದು ಕೇಳುತ್ತಿದ್ದೇವೆ. ಈಗ ಬೆಂಗಳೂರು-ಮೈಸೂರು ಬ್ರಾಡ್‌ಗೇಜ್ ಕಾರ್ಯ ಪ್ರಗತಿಯಲ್ಲಿ ಇದ್ದು ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳುತ್ತಿದ್ದೇವೆ. ಇದನ್ನು ಆದಷ್ಟು ಬೇಗ ಮುಗಿಸಬೇಕು ಎನ್ನುವುದರ ಜೊತೆಗೆ ಮೀರಜ್-ಬೆಂಗಳೂರು ನಡುವೆ ಬ್ರಾಡ್ಗೇಜ್ ಪರಿವರ್ತನೆಯಾಗಬೇಕೆಂದು ಕೇಳಿದ್ದೇವೆ. ಹಾಗೆಯೇ ಹೊಸಪೇಟೆ-ಹುಬ್ಬಳ್ಳಿಗೆ ಸಂಪರ್ಕ ಏರ್ಪಡಿಸುವುದು ಇದೆ. ಕಾರವಾರದಲ್ಲಿ ಪೋರ್ಟ್ ಬರುತ್ತಿರುವುದರಿಂದ ರೈಲು ಸಂಪರ್ಕ ವ್ಯವಸ್ಥೆ ಹೆಚ್ಚು ಇದೆ. ಚಾಮರಾಜನಗರ-ಮೆಟ್ಟುಪಾಳ್ಯದ್ದೂ ಕೂಡ ಇದೆ. ಹರಿಹರ-ಕೊಟ್ಟೂರು ಭಾಗದ್ದು ಇದೆ.

ಯಾವುದೂ ಇಲ್ಲ ಎಂದು ಅಲ್ಲ. ಈ ಮೊದಲೂ ರೈಲ್ವೇ ಖಾತೆ ಸಚಿವರ ಜೊತೆ ನಾನು ಮಾತನಾಡಿದ್ದೇನೆ. ಸುಮಾರು 2 ತಿಂಗಳ ಮುಂಚೆ ನಾನು ಮಾತನಾಡಿದ್ದೇನೆ. ಈಗ ಏನು ವರದಿಗಳು ಬರುತ್ತಿವೆ ಎಂದು ನಾನು ನೋಡಿಲ್ಲ. ತಾವು ನೋಡಿದ್ದೀರೆಂದು ಹೇಳುತ್ತಿದ್ದೀರಿ. ನಾನು ಅವನ್ನು ಸಂಪೂರ್ಣವಾಗಿ ನೋಡುವುದಕ್ಕೆ ಆಗಿಲ್ಲ. ರೈಲ್ವೆ ಬಡ್ಜೆಟ್ ಮಂಡನೆ ಆಗಿದ್ದು ಈಗ ವಿವರಗಳು ಬರುತ್ತಾ ಇದ್ದು, ಅವುಗಳ ಸಂಪೂರ್ಣ ಪಾಠವನ್ನು ನಾವು ನೋಡೋಣ. ಪೂರ್ಣ ವಿವರ ನೋಡದೇ ಸಂಪೂರ್ಣ ತೀರ್ಮಾನಕ್ಕೆ ಬರುವುದು ಒಳ್ಳೆಯದಾಗುವುದಿಲ್ಲ.

ಎರಡನೆಯ ವಿಚಾರ ಈಗ ನಾವು ಕರ್ನಾಟಕಕ್ಕೆ ಎಲ್ಲವನ್ನು ಕೇಳಿದರೆ ಎಲ್ಲವನ್ನು ಕೊಡುವುದಕ್ಕೆ ಆಗದಿದ್ದರೆ ಕೆಲವನ್ನು ಕೊಟ್ಟರೆ ಸಮಾಧಾನವಾಗುತ್ತದೆ. ಒಂದು ವೇಳೆ ಕೊಡಲಿಲ್ಲವೆಂದರೆ ಮುಂದೆ ನಾವೇನು ಮಾಡಬೇಕು ಎನ್ನುವ ವಿಚಾರದಲ್ಲಿ ನಾವೇನು ಮಾಡಬೇಕು ಎನ್ನುವುದನ್ನು ಮೊದಲು ಮಾತನಾಡಿಕೊಳ್ಳೋಣ. ಈಗ ಒಬ್ಬರು ನಿರ್ಣಯ ತರಬಹುದು, ಮತ್ತೊಂದು ಹೇಳಬಹುದು ಆ ಎಲ್ಲಾ ಸಲಹೆಗಳು ಸಹಜವಾಗಿ ವಿಭಿನ್ನವಾಗಿ ಬರತಕ್ಕ ಸಂದರ್ಭಗಳಿವೆ. ಆದ್ದರಿಂದ ಮುಂದೆ ಕೇಂದ್ರಸರ್ಕಾರದ ಮೇಲೆ ರೈಲ್ವೆ ಇಲಾಖೆಯ ಮೇಲೆ ಒತ್ತಡ ತರುವುದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಕುಳಿತು ವಿಚಾರ ಮಾಡಬೇಕು. ನಿರ್ಣಯ ತನ್ನಿ ಯಾವ ರೀತಿ ಮಾಡಬೇಕು ಇವೆಲ್ಲಾ ವಿಚಾರ ಬರುತ್ತವೆ. ಯಾವ ಕಾರ್ಯ ವಿಧಾನ ಮಾಡಬೇಕೆನ್ನುವ ಬಗ್ಗೆ ನಾವು ವಿಚಾರ ಮಾಡೋಣ. ಈ ಬಗ್ಗೆ ಭಿನ್ನಾಭಿಪ್ರಾಯವಿದೆ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಯಾವ ದೃಷ್ಟಿಯಲ್ಲಿ ಮಾಡಬೇಕೆನ್ನುವುದನ್ನು ವಿಚಾರ ಮಾಡೋಣ. ತಾವು ತಮ್ಮ ಸ್ಥಾನಕ್ಕೆ ಹೋಗಿ. ಅಲ್ಲಿ ತಾವು ಕುಳಿತು ಮಾತನಾಡಿ ಸರ್ವಪಕ್ಷಗಳವರು ಕುಳಿತುಕೊಂಡು ಮಾತನಾಡೋಣ. ಒಂದು ವೇಳೆ ಅನ್ಯಾಯವಾಗಿದ್ದರೆ ಯಾವರೀತಿ ಮಾಡಬೇಕೆನ್ನುವ ಬಗ್ಗೆ ವಿಚಾರ ಮಾಡೋಣ. ಪೂರ್ಣ ಪಾಠ ನಮಗೆ ಇನ್ನು ಗೊತ್ತಿಲ್ಲ. ರೈಲ್ವೆ ಬಜೆಟ್‌ನ್ನು ಮಂಡನೆ ಮಾಡಿ ಮುಗಿದಿದೆಯೆಂದು ನಾನು ಭಾವಿಸಲಾರೆ. ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ. ಅದರ ಬಗ್ಗೆ ವಿಚಾರ ಮಾಡೋಣವೆಂದು ನಾನು ವಿನಂತಿ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ತಮ್ಮ ಪೀಠಕ್ಕೆ ವೆಲ್‌ನಿಂದ ಎದ್ದು ಬಂದರು)

ಉಪಾಧ್ಯಕ್ಷರು : ಈಗ ಮಾನ್ಯ ಸದಸ್ಯರಾದ ಕೆ.ಬಿ. ಕೋಳಿವಾಡ್‌ರವರು ತಮ್ಮ ಭಾಷಣ ಪ್ರಾರಂಭ ಮಾಡಿ.

ಶ್ರೀ ಕೆ.ಬಿ. ಕೋಳಿವಾಡ್ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ ಮತ್ತು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮಾನ್ಯ ರಾಜ್ಯಪಾಲರ ಭಾಷಣದ ಕೊನೆಯ ಭಾಗವನ್ನು ಮೊದಲು ತೆಗೆದುಕೊಂಡು ನಂತರ ಮೊದಲನೆಯ ಭಾಗದಲ್ಲಿ ಸರ್ಕಾರ ಬಡವರ ಉನ್ನತಿಗಾಗಿ ಸಮಾಜದಲ್ಲಿ ಕೊನೆಯ ಸ್ಥಾನದಲ್ಲಿರುವ ಜನರ ಸಲುವಾಗಿ ಯಾವ ಕಾರ್ಯವನ್ನು ತೆಗೆದುಕೊಂಡಿದೆ ಎನ್ನುವ ಸವಿಸ್ತಾರಕ್ಕೆ ಆಮೇಲೆ ಬರುತ್ತೇನೆ. ಕೊನೆಯ ಭಾಗದಲ್ಲಿ ರಾಜ್ಯಪಾಲರು ಈ ರೀತಿ ಹೇಳಿದ್ದಾರೆ.

"ಸನ್ಮಾನ್ಯ ಸದಸ್ಯರೇ, ಜನತೆಯ ಪ್ರತಿನಿಧಿಗಳಾಗಿ ನೀವು ಹೊಂದಿರುವ ಜವಾಬ್ದಾರಿಗಳನ್ನು ನೀವು ಅರಿತಿದ್ದೀರಿ. ಅಂತೆಯೇ, ಕರ್ನಾಟಕ ವಿಧಾನಮಂಡಲದ

ಉನ್ನತ ಪರಂಪರೆಗನುಗುಣವಾಗಿ ನಿಮ್ಮ ಈ ಜವಾಬ್ದಾರಿಗಳನ್ನು ನೀವು ನಿರ್ವಹಿಸುತ್ತೀರಿ. ಅಭಿವೃದ್ಧಿ ಕುರಿತ ಸರ್ಕಾರದ ತತ್ವಗಳನ್ನು ಜನತೆಗೆ ತಲುಪಿಸುವಲ್ಲಿ ನಿಮ್ಮ ಪಾತ್ರ ಪ್ರಮುಖವಾದುದು" ಎನ್ನತಕ್ಕದ್ದನ್ನು ಸನ್ಮಾನ್ಯ ರಾಜ್ಯಪಾಲರು ಆದೇಶಿಸಿದ್ದಾರೆ. ಉನ್ನತ ಪರಂಪರೆಗನುಗುಣವಾಗಿ ಸದನದ ಕಾರ್ಯಕಲಾಪಗಳು ನಡೆಯುತ್ತಿವೆಯೋ ಇಲ್ಲವೋ ಎನ್ನುವ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ರಾಜ್ಯದ ಅತ್ಯುನ್ನತ ಸ್ಥಾನದಲ್ಲಿರತಕ್ಕ ಸನ್ಮಾನ್ಯ ರಾಜ್ಯಪಾಲರು ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಅವರಿಗೆ ಕೊಡತಕ್ಕ ಗೌರವವನ್ನು ಸದನದ ಕೆಲವು ಸದಸ್ಯರು ಕೊಟ್ಟಿದ್ದಾರೋ ಇಲ್ಲವೋ, ಉಚ್ಚ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೋ ಇಲ್ಲವೋ ಎಂಬುದನ್ನು ತಾವು ಹೊರಡಿಸಿ ಅದರಲ್ಲಿ ಒಂದು ಮಾತನ್ನು ಹೇಳುತ್ತೀರಿ. ಅದೇನೆಂದರೆ ರಾಜ್ಯಪಾಲರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವುದಕ್ಕೆ ಮೊದಲು ಅಥವಾ ಭಾಷಣ ಪ್ರಾರಂಭಿಸಿದಾಗ ಅಥವಾ ಭಾಷಣ ಪ್ರಾರಂಭ ಮಾಡುವಾಗ ಅಥವಾ ಭಾಷಣ ಮುಗಿಸಿದ ನಂತರ ಯಾವ ಸದಸ್ಯರಾಗಲೀ ಭಾಷಣ ಮಾಡುವುದರ ಕ್ರಿಯಾಲೋಪ ಸೂಚಿಸುವುದರ, ಸಭಾತ್ಯಾಗ ಮಾಡುವುದರ ಮೂಲಕ ಅಥವಾ ಇನ್ಯಾವುದೇ ಅಡ್ಡಿ ಅಡಚಣೆಗಳನ್ನು ಮಾಡದಿರುವುದು ಸತ್‌ಸಂಪ್ರದಾಯವಾಗಿದೆ ಎನ್ನುವ ಮಾತಿನಲ್ಲಿ ಲಘು ಟಿಪ್ಪಣಿ ಕೊಟ್ಟಿದ್ದಾರೆ. ಮೊನ್ನೆ 21ನೇ ತಾರೀಖಿನ ದಿವಸ ಸನ್ಮಾನ್ಯ ರಾಜ್ಯಪಾಲರನ್ನು ಮೆರವಣಿಗೆಯಲ್ಲಿ ಕರೆತರುವಾಗ ನಾವೆಲ್ಲಾ ಕುಳಿತುಕೊಂಡು ಅವರು ಒಳಗೆ ಬಂದಾಗ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಆ ನಿಯಮಗಳನ್ನು ಪಾಲಿಸಿ ನಾವೆಲ್ಲರೂ ಅವರು ಕೂಡುವವರೆಗೆ ಎದ್ದು ನಿಲ್ಲಬೇಕೆಂದು ನಿಯಮ ಇದೆ. ಆ ರೀತಿ ಮಾಡದೆ ಕೆಲವು ಸದಸ್ಯರುಗಳು ರಾಜ್ಯಪಾಲರು ಭಾಷಣ ಪ್ರಾರಂಭ ಮಾಡುತ್ತಿದ್ದಂತೆ ಅವರ ಭಾಷಣದ ಪ್ರತಿಯನ್ನು ಹರಿದು ನುಚ್ಚುನೂರು ಮಾಡಿ ಒಗೆದು ಮನಸ್ಸಿಗೆ ಬಂದಹಾಗೆ ಕೂಗಾಡಿ ಕರ್ನಾಟಕದ ಸತ್‌ಸಂಪ್ರದಾಯಕ್ಕೆ ಕುಂದು ತಂದಿದ್ದಾರೆಂದು ಹೇಳಿದರೆ ತಪ್ಪಾಗಲಾರದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದರ ಬಗ್ಗೆ ನಾನು ಹೆಚ್ಚಿನ ವೇಳೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಮ್ಮ ವಿಧಾನ ಮಂಡಲದ ಕಾರ್ಯಕಲಾಪಗಳಿಗೆ, ಪಾರ್ಲಿಮೆಂಟರಿ ಬಿಸಿನೆಸ್‌ಗೆ ಬೈಬಲ್‌ನಂತಿರುವ ಕೌಲ್ ಮತ್ತು ಶಕ್ದರ್ ಅವರ ಪುಸ್ತಕದಲ್ಲಿ ಹೇಳಿರುವ ಎರಡು ವಾಕ್ಯಗಳನ್ನು ನಾನು ಓದುವುದಕ್ಕೆ ಇಚ್ಛಿಪಡುತ್ತೇನೆ. ಗವರ್ನರ್ ಸ್ಪೀಚ್ ಅಂದರೆ ಏನು, ಅದಕ್ಕೆ ಯಾರು ಜವಾಬ್ದಾರರು ಎನ್ನುವುದಕ್ಕೆ ಮೊದಲು ಅದನ್ನು ತಿಳಿದುಕೊಳ್ಳಬೇಕಾಗುತ್ತದೆ. "It is a statement of policy of the Government. Address is drafted by the Government. It is not the Governor who is responsible for the contents. It is the government which is responsible for the contents of the address and it is merely a policy of the government for the current year and other activities of the government."

ಹೀಗಿರುವಾಗ ಮಾನ್ಯ ಸದಸ್ಯರುಗಳು, ಅದರಲ್ಲಿ ಇರತಕ್ಕಂಥ ಸರ್ಕಾರದ ಯೋಜನೆಗಳನ್ನು ಟೀಕೆಟಿಪ್ಪಣಿಗಳ ಮುಖಾಂತರ ಮಂಡಿಸುವುದಾದರೆ, ಈ ಚರ್ಚೆ ನಡೆಯುವ ಕಾಲಕ್ಕೆ ಸಾಕಷ್ಟು ಅವಕಾಶ ಅವರಿಗೆ ಇದೆ. ಸಾಕಷ್ಟು ಹರಿತವಾದ ಶಬ್ದಗಳಿಂದ ಸರ್ಕಾರವನ್ನು ತಿವಿಯಲಿಕ್ಕೆ ಸಾಧ್ಯ ಇದೆ. ಅದನ್ನು ಬಿಟ್ಟು ಸನ್ಮಾನ್ಯ ಅನೇಕ ಸದಸ್ಯರುಗಳು ಎಕ್ಸಿಕ್ಯೂಟಿವ್ ಹೆಡ್ ಆದ, ನಮ್ಮ ನ್ಯಾಯಾಂಗ, ಕಾರ್ಯಾಂಗ

ಮತ್ತು ಶಾಸಕಾಂಗಗಳಿಗೆ ಹೆಡ್ ಆದ, ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ಸ್ವಲ್ಪವೂ ಗೌರವ ತೋರದ ರೀತಿಯಲ್ಲಿ ನಡೆದುಕೊಂಡಿದ್ದಾರೋ ಎನ್ನುವ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೌಲ್ ಅಂಡ್ ಶಕ್ದರ್‌ನಲ್ಲಿ ಒಂದು ಹೇಳಿದ್ದಾರೆ.

"The President's Address to both Houses of Parliament assembled together is the most solemn and formal act under the Constitution. Utmost dignity and decorum befitting that occasion is maintained. Any action on the part of a member which mars the occasion of the President's Address or creates disturbance is punishable by the House to which he belongs" ಎನ್ನತಕ್ಕದ್ದನ್ನು ನಾವು ಇಲ್ಲಿ ನೋಡಿದಾಗ, ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ, ಅಲ್ಲಿ ಪಾರ್ಲಿಮೆಂಟ್‌ನಲ್ಲಿ ಇಬ್ಬರು ಸದಸ್ಯರನ್ನು ಪನಿಶ್ ಮಾಡಿದಾಗ ಆ ಸದಸ್ಯರು ಕೋರ್ಟಿಗೆ ಹೋಗಿ ರಿಟ್ ಮಾಡಿದರೂ ಸಹಿತ, ಆ ರಿಟ್ ಡಿಸ್‌ಮಿಸ್ ಆಗಿದೆ. ಇಂತಹ ಸಂದರ್ಭದಲ್ಲಿ ಉಳಿದ ವಿಧಾನಮಂಡಲಗಳಿಗಿಂತಲೂ ಕರ್ನಾಟಕ ವಿಧಾನಮಂಡಲ ಉಚ್ಛ ಪರಂಪರೆಯನ್ನು ಕಾಯ್ದುಕೊಂಡು ಬಂದಿದೆ. ಇನ್ನುಮುಂದೆಯೂ ಕೂಡ ಉಚ್ಚ ಪರಂಪರೆಯನ್ನು ಕಾಯ್ದುಕೊಂಡು ಹೋಗೋಣ. ಇದರಲ್ಲಿ ಸಾಕಷ್ಟು ಸ್ಕೋಪ್ ಇದೆ. ರಾಜ್ಯಪಾಲರ ಭಾಷಣದ ಮೇಲೆ ಅವರು ಏನಾದರೂ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಅದರ ಸಲುವಾಗಿ ಕೌಲ್ ಅಂಡ್ ಶಕ್ದರ್‌ನಲ್ಲಿ "The scope of the discussion the Address is very wide and the entire administration is thrown open for discussion . Even matters which are not specifically mentioned in the Address are brought into discussion through amendments to Motion of Thanks" ಎಂದು ಇದೆ.

ಇಷ್ಟೆಲ್ಲಾ ಸದಸ್ಯರಿಗೆ ಅವಕಾಶ ಇದ್ದಾಗ್ಯೂ ಸಹಿತ ಸನ್ಮಾನ್ಯ ಗೌರವಾನ್ವಿತ ರಾಜ್ಯಪಾಲರ ಭಾಷಣ ನಡೆದಾಗ ಸದಸ್ಯರ ನಡವಳಿಕೆ ನಿಜವಾಗಿಯೂ ಮನಸ್ಸಿಗೆ ನೋವು ತಂದಿದ್ದು, ಆ ರೀತಿ ಆಗಬಾರದಿತ್ತು ಎಂಬ ಮಾತನ್ನು ನಾನು ಬಹಳ ಕಳಕಳಿಯಿಂದ ತಮ್ಮ ಮೂಲಕ ಸದನದ ಸದಸ್ಯರಿಗೆ ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದೂ ಅಲ್ಲದೆ, ರಾಷ್ಟ್ರಗೀತೆ ನಡೆಯುವಾಗ ಪ್ರತಿಯೊಬ್ಬರೂ ಅದಕ್ಕೆ ಗೌರವ ಕೊಡತಕ್ಕಂಥ ಕರ್ತವ್ಯ ನಮ್ಮೆಲ್ಲರದ್ದು ಆಗಿದೆ. ಮೊನ್ನೆ ತಾನೆ 21ನೇ ತಾರೀಖಿನ ದಿವಸ ರಾಜ್ಯಪಾಲರ ಭಾಷಣ ಮುಗಿದು ರಾಷ್ಟ್ರಗೀತೆ ನಡೆಯುವಾಗ ಎದ್ದು ನಿಲ್ಲುವುದನ್ನು ಬಿಟ್ಟು ರಾಜ್ಯಪಾಲರ ಭಾಷಣದ ಪ್ರತಿಯನ್ನು ಚೂರುಚೂರು ಮಾಡಿ ಕೂಗಾಡುತ್ತಾ ಹೋಗತಕ್ಕಂಥ ಒಬ್ಬ ಸದಸ್ಯರನ್ನು ನೋಡಿದಾಗ, ಎಷ್ಟು ಸತ್ಸಂಪ್ರದಾಯವನ್ನು ಎತ್ತಿ ಹಿಡಿಯುವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಬಹುದು. ಈ ಸದನದಲ್ಲಿರತಕ್ಕ 224 ಜನ ಸದಸ್ಯರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ 2 ಲಕ್ಷ ಜನತೆಯ ಪ್ರತಿನಿಧಿಗಳಾಗಿ ಇಲ್ಲಿ ಬಂದಿದ್ದೇವೆ. ಕರ್ನಾಟಕದ ಎಂಟು ಕೋಟಿ ಕಣ್ಣುಗಳೂ ನಮ್ಮ ಪ್ರತಿಯೊಂದು ನಡವಳಿಕೆಗಳನ್ನೂ ನೋಡುತ್ತಿದ್ದಾರೆ ಎನ್ನುವುದನ್ನು ಅರಿತುಕೊಂಡು ಸದನದಲ್ಲಿ ನಾವು ನಡೆದುಕೊಳ್ಳಬೇಕೆಂದು ನಮ್ರತೆಯಿಂದ ತಮ್ಮ ಮುಖಾಂತರ ಸದನದ ಸದಸ್ಯರಿಗೆ ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ಈ

ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ ಎರಡನೇ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ.

"ಸಮಾಜದ ಬಡ ವರ್ಗದವರ ಉನ್ನತಿಗಾಗಿ ಮತ್ತು ರಾಜ್ಯದ ಜನರಿಗೆ, ಅದರಲ್ಲೂ ಮುಖ್ಯವಾಗಿ, ಗ್ರಾಮಗಳಲ್ಲಿ ವಾಸಿಸುತ್ತಿರುವವರಿಗೆ ನೆಮ್ಮದಿಯ ಜೀವನ ಮಟ್ಟ ದೊರೆಯುವಂತೆ ಮಾಡಲು ನನ್ನ ಹಿಂದಿನ ಭಾಷಣದಲ್ಲಿ ನಾನು ಘೋಷಿಸಿದ್ದ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ನನ್ನ ಸರ್ಕಾರ ಬಹಳ ನಿಷ್ಠಾಪೂರ್ವಕವಾಗಿ, ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿದೆ." ಎಂಬುದಾಗಿ ಹೇಳಿದ್ದಾರೆ. ಇದನ್ನು ನಾವು ನೋಡಿದರೆ, ನಮ್ಮ ಸರ್ಕಾರ ಹೋದವರ್ಷ ಸಮಾಜದಲ್ಲಿ ಕೊನೆಯ ಗೆರೆಯಲ್ಲಿರತಕ್ಕ ಕಡುಬಡವರಿಗಾಗಿ, ಸಮಾಜದ ಕಟ್ಟಕಡೆಯ ಬಡತನ ರೇಖೆಯ ಕೆಳಗಿರತಕ್ಕ ಬಡವರಿಗಾಗಿ, ಅಲ್ಪಸಂಖ್ಯಾತರಿಗಾಗಿ ಹಾಗೂ ದೀನದಲಿತರಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆ ಎಲ್ಲಾ ಕಾರ್ಯಕ್ರಮಗಳನ್ನೂ ಅತಿ ನಿಷ್ಠೆಯಿಂದ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿಕೊಂಡು ಬಂದಿದೆ, ಮತ್ತು ಮಾಡುತ್ತಾ ಇದೆ. ಮತ್ತು ಮುಂದೆಯೂ ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎನ್ನುವುದನ್ನು ಅಂಕಿಅಂಶಗಳ ಮುಖಾಂತರ ಸದನದ ಮುಂದೆ ತರುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷಿಣಿಯರೇ, ನಮ್ಮ ಸರ್ಕಾರ ಈ ಕರ್ನಾಟಕ ರಾಜ್ಯದಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೂ ಸಾಧ್ಯವಾದ ಮಟ್ಟಿಗೂ ಉದ್ಯೋಗವನ್ನು ಕಲ್ಪಿಸಿಕೊಡಬೇಕು, ಅವನಿಗೆ ಹೊಟ್ಟೆತುಂಬ ಊಟವನ್ನು ಕೊಡಬೇಕೆಂಬ ದೃಷ್ಟಿಯಿಂದ, ಉದ್ಯೋಗ ಕಲ್ಪಿಸಿಕೊಡುವುದರ ಸಲುವಾಗಿ ರಾಜ್ಯದ ಹಳ್ಳಿಹಳ್ಳಿಗಳಲ್ಲಿ, ರಾಜ್ಯದ ಮೂಲೆ ಮೂಲೆಗಳಲ್ಲಿ ಪ್ರತಿಯೊಬ್ಬರಿಗೂ ಉದ್ಯೋಗ ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ, ಬೃಹತ್ ಯೋಜನೆಯಾದ "ವಿಶ್ವ" ಯೋಜನೆಯನ್ನು ಹೋದವರ್ಷ ಸೂಚಿಸಿ, ಅಕ್ಟೋಬರ್ ಎರಡರಂದು ನಮ್ಮ ದೇಶದ ಪ್ರಧಾನಿಗಳಿಂದ ಇದನ್ನು ಪ್ರಾರಂಭಿಸಿ, ಇವತ್ತು ಈ ಕಾರ್ಯವನ್ನು ಬಹಳ ನಿಷ್ಠಾಪೂರ್ವಕವಾಗಿ ಸರ್ಕಾರ ಕಾರ್ಯರೂಪಕ್ಕೆ ತಂದಿದೆ ಮತ್ತು ತರುವುದಕ್ಕೆ ಪ್ರಯತ್ನ ಮಾಡುತ್ತಿದೆ. 5 ವರ್ಷಗಳಲ್ಲಿ ರಾಜ್ಯದಲ್ಲಿ ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಿ, ರಾಜ್ಯದ ಪ್ರತಿಯೊಬ್ಬರಿಗೂ ಉದ್ಯೋಗವನ್ನು ಕೊಡಬೇಕೆಂಬ ಯೋಜನೆಯನ್ನು ಇಟ್ಟುಕೊಂಡು, ಪುನಃ ವಿಚಾರ ಮಾಡಿ, 5 ವರ್ಷ ಬಹಳಾದರೆ ತಡವಾಗುತ್ತದೆ, ಮೂರು ವರ್ಷದಲ್ಲಿಯೇ ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದು ಜನತೆಗೆ ಉದ್ಯೋಗ ಕೊಡಬೇಕೆಂಬ ದೃಷ್ಟಿಯಿಂದ ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾ ಇದೆ ಎನ್ನತಕ್ಕ ಮಾತನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷಿಣಿಯರೇ, ತಮ್ಮ ಮುಖಾಂತರ ಈ "ವಿಶ್ವ" ಯೋಜನೆಯ ಅಡಿಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಜನರಿಗೆ ಉದ್ಯೋಗವನ್ನು ಕೊಡಬೇಕೆಂದು ಸರ್ಕಾರ ಮುಂದಿಟ್ಟಿದೆ ಎಂಬುದನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಟೆಕ್ಸ್‌ಟೈಲ್ ಕ್ಷೇತ್ರದಲ್ಲಿ ಹ್ಯಾಂಡ್‌ಲೂಮ್ಸ್‌ಗಳು, ಪವರ್ ಲೂಮ್ಸ್‌ಗಳು, ಸಿಲ್ಕ್, ವುಲ್ ರೆಡಿಮೇಡ್ ಗಾರ್ಮೆಂಟ್ಸ್‌ಗಳು, ನಿಟೆಡ್ ಗಾರ್ಮೆಂಟ್ಸ್‌ಗಳು, ಕಾರ್ಪೆಟ್ಸ್, ಹ್ಯಾಂಡಿಕ್ರಾಫ್ಟ್ಸ್, ಕಾಯಿಲ್, ಲೆದರ್, ಫೂಟ್ಸ್, ಸ್ಟೇಷನರಿ ಈ ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಸರ್ಕಾರ ರಾಜ್ಯದ ಜನತೆಗೆ ಸಹಾಯ ಮಾಡುತ್ತಿದೆ. ಸರ್ಕಾರ ಈ ಯೋಜನೆಯನ್ನು ಇಟ್ಟುಕೊಂಡು, 5 ಲಕ್ಷ 22 ಸಾವಿರ ನಾಲ್ಕುನೂರು ಜನರಿಗೆ ಉದ್ಯೋಗವನ್ನು ಕಲ್ಪಿಸಿ ಕೊಡಬೇಕೆಂಬ ದೃಷ್ಟಿಯಿಂದ ಈಗಾಗಲೇ ಅನೇಕ ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ, ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹತ್ತಿದೆ.

3.45 ಪಿ.ಎಂ.

ಅನೇಕ ಶಾಸಕರಿಗೆ ಗೊತ್ತಾಗಿರಬಹುದು. ಈಗಾಗಲೇ ಪ್ರತಿಯೊಂದು ಅಸೆಂಬ್ಲಿ ಕ್ಷೇತ್ರದಲ್ಲಿ ಎರಡುಕಡೆ ಮೂರು ಕಡೆ ಈ ಯೋಜನೆ ಪ್ರಾರಂಭವಾಗಿದೆ. ನನ್ನ ಕ್ಷೇತ್ರವಾದ ರಾಣೆಬೆನ್ನೂರಿನಲ್ಲಿ ಎರಡು ಕಡೆ ಆಗಿದೆ. ಅಲ್ಲಿ ಕಾಯರ್ ಇಂಡಸ್ಟ್ರಿ ಪ್ರಾರಂಭವಾಗಿದೆ. ಅಲ್ಲಿ ತಯಾರಾದ ವಸ್ತುಗಳನ್ನು ಇಲ್ಲಿಗೆ ಪ್ರದರ್ಶನಕ್ಕೆ ತಂದು ಮಾರಾಟ ಮಳಿಗೆಗಳಲ್ಲಿಟ್ಟು ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆ ಪ್ರಾರಂಭವಾದಂದಿನಿಂದಲೂ ಇಲ್ಲಿಯವರೆಗೆ ನಮ್ಮ ಸರಕಾರ ಸುಮಾರು 15,022 ಪ್ರಯೋಜನದಾರರು ಎಂದರೆ ಬೆನಿಫಿಷಿಯರೀಸ್‌ಗಳನ್ನು ಹುಡುಕಿ ಅವರಿಗೆ ಯೋಗ್ಯ ಉದ್ಯೋಗ ವ್ಯವಸ್ಥೆ ಮಾಡುವ ಕೆಲಸವನ್ನು ಈಗಾಗಲೇ ಕೈಗೊಂಡಿದೆ ಎಂಬ ಮಾತನ್ನು ನಾನು ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ನಮ್ಮ ಸರಕಾರ ಈ ಒಂದು ಯೋಜನೆಯ ಗುರಿ ಐದು ವರ್ಷ ಇದ್ದರೂ ಅದನ್ನು ಮೂರು ವರ್ಷಕ್ಕೆ ತಂದು ಸುಮಾರು 5 ಲಕ್ಷ 22 ಸಾವಿರದ 400 ಜನರಿಗೆ ಕರ್ನಾಟಕದಲ್ಲಿ ಸಂಪೂರ್ಣವಾಗಿ ಉದ್ಯೋಗವನ್ನು ಕಲ್ಪಿಸಿಕೊಡಬೇಕು, ಜನರನ್ನು ಉದ್ಯೋಗರಹಿತರನ್ನಾಗಿ ಇಡಬಾರದು ಎಂಬ ದೃಷ್ಟಿಯಿಂದ ಈ ಯೋಜನೆಯನ್ನು ಹಾಕಿಕೊಂಡಿದೆ.

ಮಾನ್ಯ ಉಪಾಧ್ಯಕ್ಷಣಿಯವರೇ, ಈಗಾಗಲೇ ತಮಗೆ ಗೊತ್ತಿರುವ ಹಾಗೆ ಇಲ್ಲಿಯವರೆಗೆ ಉದ್ಯೋಗಸ್ಥರು ಏನಾದರೂ ಒಂದು ವಸ್ತುವನ್ನು ತಯಾರು ಮಾಡಿದರೂ ಅದಕ್ಕೆ ಬೆಲೆ ಸಿಗದಂತಾಗಿ ಮಾರುಕಟ್ಟೆ ಸಿಗದಂತಾಗಿ ಅವರು ತೊಂದರೆಗೆ ಒಳಗಾಗತಕ್ಕ ಪರಿಸ್ಥಿತಿಯನ್ನು ನೋಡುತ್ತಿದ್ದೆವು. ಈ "ವಿಶ್ವ" ಯೋಜನೆಯ ಅಡಿಯಲ್ಲಿ ಸರಕಾರ ಅದನ್ನು ಮಾರಾಟ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಒಳಗೊಂಡಂತೆ ಮಾಡಿ, ಸರಕಾರವೇ ಆ ವಸ್ತುಗಳನ್ನು ಖರೀದಿ ಮಾಡಿ ಬೇರೆ ಬೇರೆ ಪರರಾಷ್ಟ್ರಗಳಿಗೂ ಸಹ ಕಳುಹಿಸಿ, ದೇಶದ ಉತ್ಪನ್ನ ಹೆಚ್ಚು ಮಾಡಬೇಕು, ರಾಜ್ಯದ ಉತ್ಪನ್ನ ಹೆಚ್ಚು ಮಾಡಬೇಕು, ರಾಜ್ಯವನ್ನು ಸ್ವಯಂಪೂರ್ಣವನ್ನಾಗಿ ಮಾಡಬೇಕೆನ್ನತಕ್ಕಂಥ ಘನ ಉದ್ದೇಶದಿಂದ ಈಗಾಗಲೇ ಅನೇಕ ಮೈಲಿಗಳ ದೂರ ಈ ದಿಸೆಯಲ್ಲಿ ಮುಂದುವರಿದಿದೆ. ತಾವೇ ನೋಡಿದಹಾಗೆ ಮೊನ್ನೆತಾನೆ ಇದರ ಪ್ರದರ್ಶನ ಇಟ್ಟು ಮಾರಾಟ ಮಳಿಗೆಗಳನ್ನು ಮಾಡಿದಂಥ ಸಂದರ್ಭದಲ್ಲಿ ಜನ ಎಷ್ಟು ವ್ಯವಸ್ಥಿತ ರೀತಿಯಲ್ಲಿ ಇದರ ಬಗ್ಗೆ ಆಕರ್ಷಿತರಾಗಿದ್ದರು ಎಂಬುದನ್ನು ಪತ್ರಿಕೆಗಳಲ್ಲಿ ಓದಿರಬಹುದು. ಈಗಾಗಲೇ ಬೇರೆ ರಾಷ್ಟ್ರಗಳವರೊಂದಿಗೆ ಇದರ ಬಗ್ಗೆ ನಮ್ಮ ರಾಜ್ಯ ಒಪ್ಪಂದ ಮಾಡಿಕೊಂಡು ಇಲ್ಲಿ ತಯಾರಾದ ವಸ್ತುಗಳನ್ನು ಅಲ್ಲಿ ಮಾರಾಟ ಮಾಡಿ ರಾಜ್ಯದ ಉತ್ಪನ್ನವನ್ನು ಹೆಚ್ಚಿಸಿ ಕೊಡಬೇಕೆನ್ನತಕ್ಕಂಥ ದೃಷ್ಟಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಮಾರುಕಟ್ಟೆಗಾಗಿ ನಮ್ಮ ಅನೇಕ ಅಧಿಕಾರಿಗಳು ಬೇರೆ ಬೇರೆ ದೇಶಕ್ಕೆ ಹೋಗಿ ಬಂದಿದ್ದಾರೆ. ಸಿಂಗಪೂರ್‌ನಲ್ಲಿಯೂ ಸಹ ಇದರ ಪ್ರಭಾವ ಈಗಾಗಲೇ ಎಷ್ಟರಮಟ್ಟಿಗೆ ಆಗಿದೆ ಎಂದರೆ, ಸಿಂಗಪೂರ್ ಸರಕಾರ ನಮ್ಮಲ್ಲಿ ತಯಾರಾದ ವಸ್ತುಗಳನ್ನು ಖರೀದಿ ಮಾಡುವುದಕ್ಕೆ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದ ಪ್ರಕಾರ ಮೊದಲನೇ ಕಂತಾಗಿ 5 ಲಕ್ಷ ಅಮೇರಿಕನ್ ಡಾಲರ್ ಮೌಲ್ಯದ ಉತ್ಪನ್ನಗಳನ್ನು ಪೂರೈಸುತ್ತಿದ್ದು ನಂತರ ವಾರ್ಷಿಕ ಒಂದು ದಶಲಕ್ಷಡಾಲರ್ ಮೌಲ್ಯದ ಉತ್ಪನ್ನಗಳನ್ನು ಪೂರೈಸುವುದಾಗಿ ಈಗಾಗಲೇ ಒಪ್ಪಂದವಾಗಿದೆ ಎಂಬ ಮಾತನ್ನು ನೋಡಿದರೆ ನಿಜವಾಗಿಯೂ ನಮ್ಮ ಸರ್ಕಾರ, ಈ ದೇಶದ ಯಾವ ರಾಜ್ಯಗಳಲ್ಲೂ ಇಲ್ಲದಿರತಕ್ಕಂಥ ಮಹೋನ್ನತವಾದಂಥ ಜನತೆಗೆ ಉದ್ಯೋಗ ಕೊಡತಕ್ಕಂಥ ಕೈಗಳಿಗೆ ಉದ್ಯೋಗ ಕೊಡತಕ್ಕಂಥ ಬಡವರ ಕಾರ್ಯಕ್ರಮ ಹಾಕಿಕೊಂಡಿರುವುದನ್ನು ನೋಡಿದರೆ ಸರಕಾರ ಬಡವರ ಬಗ್ಗೆ ಎಷ್ಟು

ಅನುಕಂಪವನ್ನು ಹೊಂದಿದೆ, ಬಡವರ ಕಷ್ಟಗಳಿಗೆ ಸ್ಪಂದಿಸುವ ಹೃದಯ ಸರಕಾರಕ್ಕೆ ಇದೆ ಎಂಬುದನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಆದರ ಜೊತೆಗೆ ಹೋದವರ್ಷ ಕೊಟ್ಟ ಮಾತಿನಂತೆ ಆಶ್ರಯ ಎಂಬ ಯೋಜನೆಯನ್ನು ನಾವು ಮಾಡಿ, ಬಡವರಿಗೆ ನೆರಳನ್ನು ಕೊಡುತ್ತೇವೆ. ಈ ಸಾರಿ ಸಹ ನಾವು ರಾಜ್ಯಪಾಲರ ಮುಖಾಂತರ ಸಹ ಸರಕಾರ ಇದನ್ನು ತಿಳಿಸಿದೆ. ಮಾನ್ಯ ಉಪಾಧ್ಯಕ್ಷಣೆಯವರೇ, ಈ ದೇಶದಲ್ಲಿ ಕಡು ಬಡವನ ಬಗ್ಗೆ ಮೊಸಳೆ ಕಣ್ಣೀರು ಸುರಿಸತಕ್ಕಂಥ ಅನೇಕ ಜನರನ್ನು ನಾವು ನೋಡಿದ್ದೇವೆ. ಭಾಷಣದಲ್ಲಿ ಬಡವರ ಬಗ್ಗೆ ಕಣ್ಣೀರನ್ನು ಸುರಿಸಿ ಮತಗಳಿಸುವಂತಹ ಉದ್ದೇಶದಿಂದ ಭಾಷಣಗಳನ್ನು ಮಾಡತಕ್ಕಂಥ ಅನೇಕ ಜನರನ್ನು, ಪಕ್ಷಗಳನ್ನು ನಾವು ನೋಡಿದ್ದೇವೆ. ಇಂದು ನಮ್ಮ ಸರಕಾರ ನಿಜವಾಗಿಯೂ ಸಮಾಜದ ಕೊನೆಯ ಗೆರೆಯಲ್ಲಿರತಕ್ಕಂಥ ಬಡವರ ಪರವಾಗಿ ಹೃದಯವನ್ನು ಸ್ಪಂದಿಸಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ನಮ್ಮ ರಾಜ್ಯದಲ್ಲಿ ಹುಟ್ಟಿರತಕ್ಕಂಥ ಪ್ರತಿಯೊಬ್ಬ ಕಡು ಬಡವನಿಗೂ ಜಾಗವನ್ನು, ನಿವೇಶನವನ್ನು ಕೊಡಬೇಕೆನ್ನತಕ್ಕಂಥ ದೃಷ್ಟಿಯಿಂದ ಈ ಆಶ್ರಯ ಯೋಜನೆಯನ್ನು ಹೋದವರ್ಷ ಘೋಷಣೆ ಮಾಡಿ, ಈ ವರ್ಷದವರೆಗೆ, ಅಂದರೆ ಒಂದು ವರ್ಷದಲ್ಲಿ ನಾವು ಏನು ಗುರಿಸಾಧನೆ ಮಾಡಿದ್ದೇವೆ, ಎನ್ನುವುದನ್ನು ಅಂಕಿ ಅಂಶಗಳ ಮುಖಾಂತರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಮಾನ್ಯ ಉಪಾಧ್ಯಕ್ಷಣೀಯವರೇ ಹೋದ ವರ್ಷ ನಮ್ಮ ಸರ್ಕಾರದ ಗುರಿ ಒಂದು ಲಕ್ಷ ಬಡವರಿಗೆ ನಿವೇಶನಗಳನ್ನು ಕೊಡಬೇಕೆನ್ನುವ ಗುರಿ, ಇಟ್ಟುಕೊಂಡಿತ್ತು. ಇವತ್ತು ನಾವು ಎಷ್ಟು ಸಾಧನೆ ಮಾಡಿದ್ದೇವೆ ಎಂದರೆ 3,51,671 ನಿವೇಶನಗಳನ್ನು ದಿನಾಂಕ 31-1-1992ಕ್ಕೆ ಕರ್ನಾಟಕ ರಾಜ್ಯದಲ್ಲಿರುವ ಬಡವರಿಗೆ ನಿವೇಶನಗಳನ್ನು ಕೊಟ್ಟಿದ್ದೇವೆ. ಬರೀ ನಿವೇಶನಗಳನ್ನು ಕೊಟ್ಟರೆ ಸಾಲದು ಸಣ್ಣ ಸಣ್ಣ ಮನೆಗಳನ್ನು ಕೊಟ್ಟರೆ ನಡೆಯುವುದಿಲ್ಲ ಅದಕ್ಕೆ ವ್ಯವಸ್ಥಿತವಾಗಿ ಸಣ್ಣ ಸಣ್ಣ ಕೋಣೆಗಳನ್ನು ಮಾಡಿಕೊಡುವ ದಿಸೆಯಿಂದ ಇವತ್ತು ಹಳ್ಳಿಗಾಡು ಪ್ರದೇಶದಲ್ಲಿ 1 ಲಕ್ಷ 75 ಸಾವಿರ ಮನೆಗಳನ್ನು ಮತ್ತು ಪಟ್ಟಣ ಪ್ರದೇಶದಲ್ಲಿ 30 ಸಾವಿರ ಮನೆಗಳನ್ನು ಒಟ್ಟು 2 ಲಕ್ಷ 5 ಸಾವಿರ ಮನೆಗಳನ್ನು ಕಟ್ಟಿಸಿ ಕೊಡಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ಈ ಯೋಜನೆಯನ್ನು ಹಾಕಿಕೊಂಡಿದೆ. ಅದು ಅಲ್ಲದೆ ಡಾಕ್ಟರ್ ಅಂಬೇಡ್ಕರ್ ಹೆಸರಿನ ಮೇಲೆ ಸುಮಾರು 25 ಸಾವಿರ ಮನೆಗಳನ್ನು ಹಳ್ಳಿಗಳಲ್ಲಿ, 10 ಸಾವಿರ ಮನೆಗಳನ್ನು ಪಟ್ಟಣ ಪ್ರದೇಶದಲ್ಲಿ ಕಟ್ಟಿಸಿಕೊಡಬೇಕೆಂದು ಉದ್ದೇಶವನ್ನುಇಟ್ಟುಕೊಂಡು ಈಗಾಗಲೇ ಕಾರ್ಯಕ್ರಮ ಪ್ರಾರಂಭವಾಗಿದೆ. ದಿನಾಂಕ 7-1-92 ರಿಂದ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲೂ ಈ ಕೆಲಸ ಪ್ರಾರಂಭವಾಗಿದೆ. ಜೂನ್ 92ರೊಳಗೆ ಎಲ್ಲಾ ಮನೆಗಳನ್ನು ಕಟ್ಟಿ ಮುಗಿಸುವ ಕಾರ್ಯಕ್ರಮ ಸರ್ಕಾರ ಈಗಾಗಲೇ ಕಾರ್ಯರೂಪಕ್ಕೆ ತಂದಿದೆ. ಇಂತಹ ಯೋಜನೆಯನ್ನು ಕೇವಲ ಘೋಷಣೆ ಮಾಡುವುದೇ ಅಲ್ಲ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಆ ದಿಸೆಯಲ್ಲಿ ಬಿಗಿ ಕಾರ್ಯಕ್ರಮ ಹಾಕಿಕೊಂಡು ಸರ್ಕಾರ ತನ್ನ ಉದ್ದೇಶ ಸಾಧಿಸಿದೆ. ಅಷ್ಟೇ ಅಲ್ಲ, ನಿವೇಶನಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಸತತವಾಗಿ ಮುಂದುವರಿಯತಕ್ಕಂಥ ಕಾರ್ಯಕ್ರಮ. ಈಗ ನಮ್ಮ ರಾಜ್ಯದಲ್ಲಿ 9 ಲಕ್ಷ ಜನ ಮನೆ ಮಠ ಇಲ್ಲದ ಬಡವರನ್ನು ಗುರುತಿಸಿದ್ದಾರೆ. ಆ ಎಲ್ಲಾ 9 ಲಕ್ಷ ಕುಟುಂಬಗಳಿಗೆ ನಾವು ನಿವೇಶನಗಳನ್ನು ಕೊಡುವವರೆವಿಗೂ ಸಹ ಈ ಕಾರ್ಯಕ್ರಮವನ್ನು ಮುಂದುವರಿಸುತ್ತೇವೆ ಎನ್ನುವುದು ಸರ್ಕಾರದ ಧೋರಣೆಯಾಗಿದೆ. ಈಗಾಗಲೇ ಸರ್ಕಾರ ಘೋಷಣೆ ಮಾಡಿದೆ. ಇದರ ಜೊತೆಗೆ ನಮ್ಮ ಸರ್ಕಾರ ಇಲ್ಲಿಯವರೆಗೂ ನಿವೇಶನಗಳನ್ನು ಇಲ್ಲದೆ ಇರತಕ್ಕಂಥ ಜಾಗಗಳಲ್ಲಿ ಜಮೀನು ಅಕ್ವೈರ್ ಮಾಡತಕ್ಕಂಥ ಪದ್ಧತಿ ಇತ್ತು. ಆದರೆ ಅದು ಈಗ

ಆಯಾಯ ಊರುಗಳಲ್ಲಿ ಪರಸ್ಪರ ವಿಚಾರ ವಿನಿಮಯ ಮುಖಾಂತರ ಹೊಲಗಳನ್ನು ಖರೀದಿಸಿ ಸರ್ಕಾರ ದುಡ್ಡು ಕೊಟ್ಟು ಖರೀದಿಸಿ ನಿವೇಶನಗಳನ್ನಾಗಿ ಮಾಡಿ ಬಡವರಿಗೆ ಸಂಪೂರ್ಣವಾಗಿ ನಿವೇಶನಗಳನ್ನು ಕೊಡಬೇಕು ಸಾಧ್ಯವಾದ ಮಟ್ಟಿಗೆ ನಿವೇಶನಗಳನ್ನು ಕೊಡಬೇಕು ಅತಿ ಶೀಘ್ರದಲ್ಲಿ ಕರ್ನಾಟಕ ರಾಜ್ಯದ 9 ಲಕ್ಷ ಬಡವರಿಗೆ ನಿವೇಶನಗಳನ್ನು ಕೊಡುವ ಯೋಜನೆಯನ್ನು ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಸರ್ಕಾರ ಸತತವಾಗಿ ಪ್ರಾಮಾಣಿಕವಾದ ನಿಷ್ಠೆಯಿಂದ ಈ ಕಾರ್ಯಕ್ರಮವನ್ನು ಮಾಡುತ್ತಿದೆ ಎನ್ನುವ ಮಾತನ್ನು ನಾನು ಹೆಮ್ಮೆಯಿಂದ ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇದರ ಜೊತೆಗೆ ಮಾನ್ಯ ಉಪಾಧ್ಯಕ್ಷಣಿಯವರೇ ಸರ್ಕಾರ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆ ಕಾರ್ಯಕ್ರಮಗಳನ್ನು ಪ್ರತಿಯೊಂದನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆರಾಧನ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈಗಾಗಲೇ ಈ ಆರಾಧನಾ ಕಾರ್ಯಕ್ರಮ ಪ್ರತಿಯೊಬ್ಬ ಶಾಸಕರಿಗೂ ಗೊತ್ತಿರಬೇಕು ತಮ್ಮ ತಮ್ಮ ಕ್ಷೇತ್ರಗಳಿಗೆ ಹಣ ಬಂದಿದೆ. ಹಳ್ಳಿಗಳಲ್ಲಿ ಅನೇಕ ಹರಿಜನ, ಗಿರಿಜನರ ಓಣಿಗಳಲ್ಲಿ ಅನೇಕ ದೇವಸ್ಥಾನಗಳು ಹೆಣ್ಣು ದೇವರುಗಳು ಇರಬಹುದು ಗಂಡು ದೇವರುಗಳ ಗುಡಿಗಳು ನಾಶವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರ ಪ್ರತಿಯೊಂದಕ್ಕೂ ಕನಿಷ್ಟ ಒಂದು ಕ್ಷೇತ್ರದಲ್ಲಿ 20-25 ಗುಡಿಗಳನ್ನಾದರೂ ಕಟ್ಟಿಸಬೇಕು ಎನ್ನುವ ದೈವಿ ಭಕ್ತಿಯಿಂದ ಕೆಲಸ ಮಾಡುತ್ತಿದೆ.

ಈ ಒಂದು ದೈವೀ ಭಾವನೆ ದೇಶದಲ್ಲಿ ಬೆಳಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈಗಾಗಲೇ ಒಟ್ಟು 1 ಕೋಟಿ 99 ಲಕ್ಷ ಚಿಲ್ಲರೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ನಮ್ಮ ಧಾರವಾಡ ಜಿಲ್ಲೆಗೆ ಈಗಾಗಲೇ 16,07,103 ರೂಪಾಯಿಗಳು. ರಾಣಿಬೆನ್ನೂರು ತಾಲ್ಲೂಕಿಗೆ 1 ಲಕ್ಷದ 20 ಸಾವಿರ ರೂಪಾಯಿಗಳು ಈಗಾಗಲೇ ಬಂದಿದೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರ ಬರೀ ಬಾಯಿ ಮಾತಿನ ಘೋಷಣೆಯಿಂದ ಜನರನ್ನು ಸಮಾಧಾನಗೊಳಿಸುವ ಸರ್ಕಾರವಲ್ಲ, ಆಡಿದಂತೆ ಮಾಡಿ ತೋರಿಸುತ್ತದೆ ಎಂದು ಹೇಳುವುದಕ್ಕಾಗಿ ಈ ಅಂಕಿ ಅಂಶಗಳನ್ನು ಇಟ್ಟು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಪೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ 'ಅಕ್ಷಯ' ಎನ್ನುವ ಕಾರ್ಯಕ್ರಮವನ್ನು ಸರ್ಕಾರ ಘೋಷಣೆ ಮಾಡಿತು. ಎಂದರೆ ಶಿಕ್ಷಣ ಕೇವಲ ಶ್ರೀಮಂತರಿಗೆ ಮೀಸಲಾಗಿರಬಾರದು. ಶ್ರೀಮಂತರ ಮಕ್ಕಳು ಶಾಲೆಗೆ ಹೋಗಿ ತಮ್ಮ ವೆಚ್ಚದಲ್ಲಿ ಶಿಕ್ಷಣವನ್ನು ಮುಂದುವರಿಸುವ ಶಕ್ತಿ ಅವರಿಗಿದೆ. ಕಡು ಬಡವನ ಮಕ್ಕಳು, ಹಳ್ಳಿಗಾಡಿನಲ್ಲಿ ತಾವು ನೋಡಿರಬಹುದು. ಆ ಬಡವನ ಮಕ್ಕಳು ಆವತ್ತು ದುಡಿದು ಗಳಿಸಿ ತರದಿದ್ದರೆ ಆ ರಾತ್ರಿ ಅವನ ಊಟಕ್ಕೂ ಸಹಿತಾ ತೊಂದರೆಯಾಗತಕ್ಕಂಥ ಮತ್ತು ಕೇವಲ ಗಂಜಿ ಕುಡಿದು ಮಲಗತಕ್ಕಂಥ ಪರಿಸ್ಥಿತಿ ಇವತ್ತು ಇದೆ. ಅಂಥ ಕಡು ಬಡವರ ಮಕ್ಕಳ ಬಗ್ಗೆ ಸರ್ಕಾರ ಸ್ಪಂದಿಸಿ ಒಂದನೆಯ ಇಯತ್ತೆಯಿಂದ 4ನೇ ಇಯತ್ತೆಯವರೆಗೆ ಇರತಕ್ಕಂಥ ಮಕ್ಕಳಿಗೆ ಒಂದು ದಿನ ಆ ಮಗು ಶಾಲೆಗೆ ಬಂದರೆ ಒಂದು ರೂಪಾಯಿ ಕ್ಯಾಷ್ ಪೇಮೆಂಟ್ ಮಾಡಬೇಕೆನ್ನುವ ದೃಷ್ಟಿಯಲ್ಲಿ ಈಗಾಗಲೇ ಸರ್ಕಾರ ಹಣವನ್ನು ಕಳುಹಿಸಿಕೊಟ್ಟಿದೆ. ಡ್ರಾಪ್ ಔಟ್‌ನ್ನು ಕಡಿಮೆ ಮಾಡಬೇಕು, ಬಡವರ ಮಕ್ಕಳು ವಿದ್ಯಾವಂತರಾಗಬೇಕು, ಅನಕ್ಷರತೆ ನಮ್ಮ ದೇಶದಲ್ಲಿ ಕಡಿಮೆಯಾಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈಗಾಗಲೇ ಈ ಅಕ್ಷಯ ಯೋಜನೆಗೆ ನಮ್ಮ ಸರ್ಕಾರ ಹಣ ಬಿಡುಗಡೆ ಮಾಡಿದೆ. ಈಗಾಗಲೇ 18 ಕೋಟಿ 7 ಲಕ್ಷದ 65 ಸಾವಿರ ರೂಪಾಯಿ 75ರೂಪಾಯಿಗಳನ್ನು ಆಯಾಯ ಜಿಲ್ಲಾಧಿಕಾರಿಗಳಿಗೆ, ಆಯಾಯ ಡಿ.ಡಿ.ಪಿ.ಐ. ಗಳಿಗೆ ಇದನ್ನು ಕಳುಹಿಸಿ ಕೊಟ್ಟು ಆ ಯೋಜನೆ ಕಾರ್ಯರೂಪದಲ್ಲಿ ಬರಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದೆ. ನಾನು ಏಕೆ ಅಂಕಿ ಅಂಶಗಳನ್ನು ಹೇಳಲಿಕ್ಕೆ

ಇಚ್ಛೆಪಡುತ್ತಿದ್ದೇನೆಂದರೆ, ಆಡಿದಂತೆ ಮಾಡಿ ತೋರಿಸುವ ಸರ್ಕಾರ ಇದಾಗಿದೆ ಎಂದು ತೋರಿಸುವುದಕ್ಕೆ ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಇದು ಕೇವಲ ರಾಜಕೀಯಕ್ಕಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಆ ಕಾರ್ಯಕ್ರಮಗಳು ಜಾರಿ ಬರುವಲ್ಲಿ ವಿಳಂಬವಾಗುತ್ತದೆ ಹಾಗೆಯೇ ಅದು ಮರೆತು ಹೋಗುತ್ತದೆ. ಜನರ ಪ್ರೀತಿ ಗಳಿಸುವುದಕ್ಕೆ ಮತ್ತು ಸರ್ಕಾರವನ್ನು ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಉದ್ದೇಶದಿಂದ ಮಾಡಿದಂಥ ಕಾರ್ಯಕ್ರಮ ಇವಲ್ಲ. ತಮಗೆಲ್ಲಾ ಗೊತ್ತಿರಬಹುದು. ನಮ್ಮ ಧಾರವಾಡ ದಕ್ಷಿಣ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಅನೇಕ ಕಡೆ ಪ್ರಚಾರ ಭಾಷಣಮಾಡಿದಾಗ ಹೇಳುತ್ತಿದ್ದರು 'ನೀವು ಮತ ಕೊಟ್ಟರೆ ಬಿಟ್ಟರೆ ಅದು ಬೇರೆ ವಿಷಯ' ಇದು ಮತ ಗಳಿಸುವ ಕಾರ್ಯಕ್ರಮವಲ್ಲ, ಇವು ಬಡವರಿಗಾಗಿ ಹಾಕಿದ ಕಾರ್ಯಕ್ರಮಗಳು, ಬಡವರ ಕಷ್ಟವನ್ನು ಅರಿತಂಥ ಸರ್ಕಾರ ಇದು, ಬಡವರ ಕುಂದುಕೊರತೆಗಳಿಗೆ ಸ್ಪಂದಿಸತಕ್ಕಂಥ ಸರ್ಕಾರವೆಂದು ಅನೇಕ ಸಂದರ್ಭದಲ್ಲಿ ಹೇಳುತ್ತಾ ಬಂದಿದ್ದಾರೆ. ಅದಕ್ಕೋಸ್ಕರ ಈ ಸರ್ಕಾರ ಆಡಿದಂತೆ ಮಾಡುವ ಸರ್ಕಾರವೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ನಮ್ಮ ರಾಜ್ಯಪಾಲರು ತಮ್ಮ ಭಾಷಣದ 3ನೇ ಪ್ಯಾರಾದಲ್ಲಿ 'ಹತ್ತನೆಯ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಗಳು ಬಹುಮಟ್ಟಿಗೆ ಶಾಂತಿಯುತವಾಗಿಯೇ ನಡೆದವು ಮತ್ತು ಈಗ ಶ್ರೀ ಪಿ.ವಿ. ನರಸಿಂಹರಾವ್ ಅವರ ಸಮರ್ಥ ಮತ್ತು ಅನುಭವೀ ನಾಯಕತ್ವದ ಸುಭದ್ರ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಪಿ.ವಿ. ನರಸಿಂಹರಾಯರ ಆಡಳಿತ ವೈಖರಿ, ಅವರ ಬುದ್ಧಿವಂತಿಕೆ, ಜನಪ್ರಿಯತೆ ಏನು ಎನ್ನುವುದನ್ನು, ಪಂಜಾಬ್ ಚುನಾವಣೆ ಇಡೀ ದೇಶಕ್ಕೆ ತೋರಿಸಿಕೊಟ್ಟಿದೆಯೆಂದು ಹೇಳಿ ಅಷ್ಟಕ್ಕೆ ಅದನ್ನು ಮುಗಿಸಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಕೆಲವೊಂದು ಕಡೆ ಹೆಚ್ಚು ಮಳೆಯಾಗಿ ದುರ್ಬಲರಾದ ಅನೇಕ ಜನರ ಮನೆಗಳು ಹಾನಿಗೆ ಈಡಾಗಿ ಬಹಳ ತೊಂದರೆಯನ್ನು ಅನುಭವಿಸತಕ್ಕ ಅನೇಕ ಸಂದರ್ಭ ಬಂದಿತ್ತು. ಅದಕ್ಕಾಗಿ ನಮ್ಮ ಸರ್ಕಾರ ಫ್ಲಡ್ ರಿಲೀಫ್‌ನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಅನೇಕ ಜನರಿಗೆ ಮನೆಯನ್ನು ಕಟ್ಟಿಸಿಕೊಡುವುದು, ಉದ್ಯೋಗ ಕೊಡುವಂಥದ್ದನ್ನು ಮಾಡಿದೆ. 31.1.92ರಲ್ಲಿನ ಅಂಕಿ ಅಂಶಗಳ ಪ್ರಕಾರ 3831. 50 ಲಕ್ಷ ರೂಪಾಯಿಗಳನ್ನು ಈ ಫ್ಲಡ್ ರಿಲೀಫ್‌ನಲ್ಲಿ ಖರ್ಚು ಮಾಡಿ ಬಡವರಿಗೆ ಅನುಕೂಲತೆಯನ್ನು ಮಾಡಿಕೊಟ್ಟಿದೆ ಎಂದು ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಕಾವೇರಿ ಜಲ ವಿವಾದದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಬಂದಿದೆ. ಈ ಕಾವೇರಿ ಜಲ ವಿವಾದದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ವಿವಾದವು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಂತಹದು. ಈ ವಿವಾದವನ್ನು ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಅತೀ ಜಾಣ್ಮೆಯಿಂದ ಎಲ್ಲಾ ಪಕ್ಷದವರವನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿವಾರಿಸಲು ಪ್ರಯತ್ನ ಮಾಡಿದೆ. ಕಾವೇರಿ ವಿವಾದದ ಬಗ್ಗೆ ಏನೇ ಕಾರ್ಯಕ್ರಮವನ್ನು ಹಾಕಿಕೊಂಡರೂ ಸಹ ವಿರೋಧ ಪಕ್ಷದ ನಾಯಕರನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಸಮರೋಪಾದಿಯಲ್ಲಿ ಈ ಮಾನ್ಯ ಸಭೆಯಲ್ಲಿ ಸರ್ವ ಸದಸ್ಯರ ವಿಶ್ವಾಸವನ್ನು ತೆಗೆದುಕೊಂಡು ಹೋದ ಕೀರ್ತಿಯ ಹೆಮ್ಮೆ ನಮ್ಮ ಸರ್ಕಾರಕ್ಕೆ ಇದೆ ಎಂದು ಈ ರೀತಿ ಹೇಳಿದರೆ ತಪ್ಪಾಗಲಾರದು. ಈ ವಿವಾದದ ಬಗ್ಗೆ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ. ನಮ್ಮ ನೆಚ್ಚಿನ ಮಾನ್ಯ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರಿಗೆ

ಇದರ ನಿವಾರಣೆಯ ಪೂರ್ಣ ಜವಾಬ್ದಾರಿಯನ್ನು ನಾವು ಹೊರಿಸಿದ್ದೇವೆ. ಪರಸ್ಪರ ಮಾತುಕತೆಗಳ ಮುಖಾಂತರ ಈ ವಿವಾದವನ್ನು ಬಗೆಹರಿಸಬೇಕೆಂದು ಸಂಪೂರ್ಣವಾದ ಜವಾಬ್ದಾರಿಯನ್ನು ಅವರಿಗೆ ಕೊಟ್ಟಿದ್ದೇವೆ. ನಾವು ನೀವು ಎಲ್ಲಾ ಸಂಪೂರ್ಣವಾದ ವಿಶ್ವಾಸವನ್ನು ನಮ್ಮ ನೆಚ್ಚಿನ ಪ್ರಧಾನಿಗಳ ಮೇಲೆ ಇಡೋಣ. ಅವರು ಎಲ್ಲರಿಗೂ ಸಮರ್ಪಕವಾಗತಕ್ಕ ಎಲ್ಲರಿಗೂ ಅನುಕೂಲ ಆಗುವ ರೀತಿಯಲ್ಲಿ ನ್ಯಾಯವನ್ನು ಬಗೆಹರಿಸುತ್ತಾರೆ ಎಂದು ಸಂಪೂರ್ಣವಾದ ವಿಶ್ವಾಸದಿಂದ ನಾವೆಲ್ಲ ಇರೋಣವೆಂದು ಹೇಳಿ ಇಷ್ಟಕ್ಕೆ ಮುಗಿಸುವುದಕ್ಕೆ ಇಚ್ಛೆ ಪಡುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಇನ್ನೊಂದು ವಿಷಯವನ್ನು ಪ್ರಸ್ತಾಪಿಸಲಾಗಿದೆ. ಯೋಜನಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವಲ್ಲಿ ರಾಜ್ಯದ ಕಾರ್ಯ ನಿರ್ವಹಣೆಯನ್ನು ಯೋಜನಾ ಆಯೋಗವು ಪ್ರಶಂಸಿಸಿದೆ. ಮುಖ್ಯವಾಗಿ ಹಣಕಾಸಿನ ನಿರ್ವಹಣೆ ಮತ್ತು ಸಂಪನ್ಮೂಲಗಳನ್ನು ಕ್ರೋಢಿಕರಿಸುವ ಮತ್ತು ಅವುಗಳನ್ನು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಬಳಸಿಕೊಳ್ಳುವಲ್ಲಿ ಮಾಡಿರುವ ಪ್ರಯತ್ನಗಳನ್ನು ಪ್ರಶಂಸಿರುವುದು ಗಮನಾರ್ಹ. ಅನೇಕ ಜನ ರಾಜ್ಯ ಸರ್ಕಾರದ ಆರ್ಥಿಕ ವ್ಯವಸ್ಥೆ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ತಾವು ಎಲ್ಲಾ ನೋಡಿರಬಹುದು. ಭಾರತದ ದೇಶದ ಯೋಜನಾ ಆಯೋಗದ ಅಧ್ಯಕ್ಷರು ಕರ್ನಾಟಕ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು, ಆ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಂತಹ ರೀತಿಯನ್ನು ಬಿಚ್ಚು ಮನಸ್ಸಿನಿಂದ ತುಂಬು ಹೃದಯದಿಂದ ಹೊಗಳಿದ್ದಾರೆ. ಇದನ್ನು ನೋಡಿದರೆ ನಮ್ಮ ಹಣಕಾಸಿನ ಮಂತ್ರಿಗಳು ಹಾಗು ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಬಂಗಾರಪ್ಪನವರು ದಕ್ಷತೆಯಿಂದ ಆರ್ಥಿಕ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಿದ್ದಾರೆ ಎಂದು ಬಹಳ ಹೆಮ್ಮೆಯಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ರಾಜ್ಯದ ಅಭಿವೃದ್ಧಿ ಆಗಬೇಕಾದರೆ ತನ್ನದೇ ಆದಂತಹ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿ ಆಗಬೇಕಾಗುತ್ತದೆ. ಕೃಷಿ, ಕೈಗಾರಿಕೆ, ವಿದ್ಯುತ್, ನೀರಾವರಿ ಈ ವಲಯಗಳಿಗೆ ಹೆಚ್ಚು ಒತ್ತು ಕೊಡುವುದು. ಒತ್ತು ಕೊಟ್ಟು ಕೆಲಸ ಮಾಡುವುದು ಕರ್ತವ್ಯ. ಈ ರೀತಿಯಾಗಿ ನಮ್ಮ ಸರ್ಕಾರ ಹೆಚ್ಚಾಗಿ ಕೃಷಿ, ನೀರಾವರಿ, ವಿದ್ಯುತ್, ಕೈಗಾರಿಕೆಗಳಿಗೆ ಬಹಳ ಹೆಚ್ಚು ಒತ್ತು ಕೊಟ್ಟು ಕಾರ್ಯಕ್ರಮವನ್ನು ಆರಂಭಿಸಿದೆ. ಕೃಷಿಯಲ್ಲಿ ಹೆಚ್ಚು ಹೆಚ್ಚು ಸುಧಾರಿತ ಬೀಜಗಳನ್ನು ಒದಗಿಸತಕ್ಕಂಥಹದು, ಭೂಸಾರ ಪರಿಕರಗಳನ್ನು ಒದಗಿಸುವುದು, ಮಣ್ಣು ಪರೀಕ್ಷೆ ಮಾಡತಕ್ಕದ್ದು, ನೀರಾವರಿ ಸೌಲಭ್ಯಗಳನ್ನು ಹೆಚ್ಚು ಒದಗಿಸತಕ್ಕಂಥಹದು, ಒಳ್ಳೆಯ ಬೀಜಗಳನ್ನು ಕೊಡತಕ್ಕ ಪೆಸ್ಟಿಸೈಡ್‌ಗಳನ್ನು ಸಬ್ಸಿಡಿ ರೂಪದಲ್ಲಿ ರೈತರಿಗೆ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಒಳ್ಳೆಯ ನಿಷ್ಠೆಯಿಂದ ಮಾಡುತ್ತಿದೆ.

ಇನ್ನು ನಮ್ಮ ಸರಕಾರ ನೀರಾವರಿಗಾಗಿ ಹಿಂದೆಂದೂ ಇರದಿರತಕ್ಕಂಥ ಮಹತ್ವವನ್ನು ಕೊಟ್ಟು ನಮ್ಮ ರಾಜ್ಯದ ನೀರನ್ನು ಸಂಪೂರ್ಣವಾಗಿ ಬಳಸಿಕೊಂಡು ರೈತರ ಭೂಮಿಯನ್ನು ನೀರಾವರಿ ಭೂಮಿಯಾಗಿ ಮಾಡಿ ಹಸಿರುಕ್ರಾಂತಿಯನ್ನು ದೇಶದಲ್ಲಿ ತರಬೇಕೆಂದು ಮಹಾನ್ ಉದ್ದೇಶವನ್ನು ಇಟ್ಟುಕೊಂಡಿದೆ. ಈಗಾಗಲೇ ನಮ್ಮ ಸರಕಾರ ಕೃಷಿ ಕ್ಷೇತ್ರದಲ್ಲಿರತಕ್ಕಂಥ ರೇಷ್ಮೆ ವ್ಯವಸಾಯ, ತೋಟಗಾರಿಕೆ, ಹಣ್ಣುಹಂಪಲುಗಳನ್ನು ಬೆಳೆಸುವುದು ಮುಂತಾದ ಉದ್ದೇಶದಿಂದ ಅನೇಕ ಜ್ಞಾನಕ್ಕಾಗಿ ಆಯಾಯ ಕ್ಷೇತ್ರದಲ್ಲಿ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ. ಅರಣ್ಯ ಕಾಲೇಜು, ರೇಷ್ಮೆ ಕಾಲೇಜು, ಅಗ್ರಿಕಲ್ಚರಲ್ ಯೂನಿವರ್ಸಿಟಿ ಮುಂತಾಗಿ ಹೆಚ್ಚು ಹೆಚ್ಚು ವಿದ್ಯಾಸಂಸ್ಥೆಗಳನ್ನು ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ.

ಇನ್ನು ಕೃಷ್ಣ ಬೇಸಿನ್‌ನಲ್ಲಿ ಬರತಕ್ಕಂಥ ನೀರಾವರಿ ಯೋಜನೆಗಳನ್ನು 2 ಸಾವಿರದ ಇಸವಿಯೊಳಗಾಗಿ ಸಂಪೂರ್ಣವಾಗಿ ಮಾಡಿ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಬೇಕೆಂಬ ಉದ್ದೇಶದಿಂದ ವಿಶ್ವಬ್ಯಾಂಕ್ ನೆರವನ್ನು ಪಡೆದುಕೊಂಡು ಕೃಷ್ಣ ನದಿ ಕಣಿವೆ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂಬ ಉದ್ದೇಶವನ್ನು ನಮ್ಮ ಸರಕಾರವು ಇಟ್ಟುಕೊಂಡಿದೆ. ಆ ಪ್ರಾಧಿಕಾರಕ್ಕೆ ಅನೇಕ ಸೂಕ್ತ ಜವಾಬ್ದಾರಿಗಳನ್ನು ಹೊರಿಸತಕ್ಕಂಥ ಉದ್ದೇಶವನ್ನು ಕೂಡ ಇಟ್ಟುಕೊಂಡಿದೆ. ಅದರ ಜೊತೆಗೆ ಈ ಪ್ರಾಧಿಕಾರಕ್ಕೆ ಸಣ್ಣ ಸಣ್ಣ ನೀರಾವರಿ ಯೋಜನೆಗಳು, ಮಧ್ಯಮ ನೀರಾವರಿ ಯೋಜನೆಗಳು, ಇವುಗಳನ್ನು ರಚನೆ ಮಾಡಿ ಅವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡತಕ್ಕಂಥ ಜವಾಬ್ದಾರಿಯನ್ನು ಪ್ರಾಧಿಕಾರಕ್ಕೆ ಒಪ್ಪಸಲು ನಮ್ಮ ಸರ್ಕಾರ ಉದ್ದೇಶಿಸಿದೆ-ಎಂಬುದನ್ನು ನಾನುಹೇಳ ಬಯಸುತ್ತೇನೆ. ಆ ದೃಷ್ಟಿಯಿಂದ ನಮ್ಮ ಸರಕಾರ ಎಷ್ಟೇ ತೊಂದರೆ ಇದ್ದರೂ ಕೂಡ ಹಣದ ಅಡಚಣೆ ಇದ್ದರೂ ಕೂಡ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಂಪೂರ್ಣವಾಗಿ ನೀರನ್ನು ಬಳಕೆ ಮಾಡತಕ್ಕಂಥ ಉದ್ದೇಶವನ್ನು ಇಟ್ಟುಕೊಂಡು ಅದನ್ನು ಕಾರ್ಯಗತ ಮಾಡುವಂಥ ಶಕ್ತಿಯನ್ನು ಕೂಡ ಹೊಂದಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಮಾನ್ಯ ಉಪಾಧ್ಯಕ್ಷಿಣಿಯವರೇ, ತಮ್ಮ ಮೂಲಕ ಸರಕಾರದ ಉದ್ದೇಶವನ್ನು ಸಮಗ್ರ ಕರ್ನಾಟಕ ರಾಜ್ಯದ ಜನತೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಈ ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿ ನಮ್ಮ ಸರಕಾರ ಇನ್ನೂ ಹೆಚ್ಚು ಹೆಚ್ಚಾಗಿ ವಿದ್ಯುತ್‌ನ್ನು ಉತ್ಪಾದನ ಮಾಡಬೇಕು, ಮಾಡಿದ್ದನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡಿದೆ. ವಿದ್ಯುತ್ ಉತ್ಪಾದನ ವಲಯವನ್ನು ಖಾಸಗೀ ವಲಯಕ್ಕೆ ಕೊಟ್ಟರೆ ಅದರಲ್ಲಿ ತಪ್ಪಿಲ್ಲ. ಅದೇ ರೀತಿಯಲ್ಲಿ ಸರಕಾರಿ ವಲಯದಲ್ಲಿರತಕ್ಕಂಥ ಯೋಜನೆಗಳನ್ನು ಕೂಡ ಆದಷ್ಟು ಬೇಗನೆ ಕೇಂದ್ರ ಸರಕಾರದ ನೆರವಿನಿಂದ ಕಾರ್ಯರೂಪಕ್ಕೆ ತರಬೇಕು ಎಂಬ ಗುರಿಯನ್ನು ಇಟ್ಟುಕೊಂಡಿದೆ. ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಗೆ ಮಾಡಬೇಕು ಅದರ ಜೊತೆಗೆ ಖಾಸಗೀಕರಣಕ್ಕೆ ಕೂಡ ಹೆಚ್ಚಿಗೆ ಬೆಂಬಲವನ್ನು ಕೊಡಬೇಕೆಂಬುದು ಸರಕಾರದ ಉದ್ದೇಶವಾಗಿದ್ದು ಈ ದಿಶೆಯಲ್ಲಿ ಕೆಲವು ಸಣ್ಣ ಜಲವಿದ್ಯುತ್ ಯೋಜನೆಗಳ ಅನುಷ್ಠಾನ ಕಾರ್ಯವನ್ನು ಖಾಸಗೀ ವಲಯಗಳಿಗೆ ಈಗಾಗಲೇ ವಹಿಸಿಕೊಡಲಾಗಿದೆ. ಎಂಬುದನ್ನು ಹೇಳಬಯಸುತ್ತೇನೆ.

ಇನ್ನು ರಸ್ತೆ ಸಾರಿಗೆ ವಿಚಾರದಲ್ಲಿ ಹೇಳುವುದಾದರೆ ಜನತೆಗೆ ಒಳ್ಳೆಯ ರೀತಿಯಲ್ಲಿ ರಸ್ತೆ ಸಾರಿಗೆ ಸೌಲಭ್ಯವನ್ನು ಒದಗಿಸಿಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಆ ದಿಸೆಯಲ್ಲಿ ನಮ್ಮ ರಾಜ್ಯ ರಸ್ತೆ ಸಾರಿಗೆ ನಿಗಮ ಎಷ್ಟೇ ಕೆಲಸಕಾರ್ಯಗಳನ್ನು ಮಾಡಿದ್ದರೂ ಕೂಡ ಇನ್ನೂ ಅನೇಕ ಸಮಸ್ಯೆಗಳು, ತೊಂದರೆಗಳು ಇವೆ. ಸುಮಾರು 9 ಸಾವಿರ ವಾಹನಗಳು ಸಾರಿಗೆ ಸಂಸ್ಥೆಯಲ್ಲಿ ಇದ್ದು 226 ವಾಹನ ನಿಲ್ದಾಣಗಳನ್ನು ಹೊಂದಿ ಕಾರ್ಯ ನಿರ್ವಹಿಸುತ್ತಿದೆ. ಆದರೂ ಕೂಡ ಈ ಸಾರಿಗೆ ವ್ಯವಸ್ಥೆಯಲ್ಲಿ ಸಮಸ್ಯೆಗಳಿದ್ದು ಅದಕ್ಕೋಸ್ಕರ ಈ ಕ್ಷೇತ್ರದಲ್ಲಿಯೂ ಸಹಿತ ಖಾಸಗೀಕರಣಕ್ಕೆ ಅನುವು ಮಾಡಿ ಜನರಿಗೆ ಸಾರಿಗೆ ವ್ಯವಸ್ಥೆಯು ಉತ್ತಮವಾಗಿ ಕೊಡಬೇಕೆಂಬ ದೃಷ್ಟಿಯಿಂದ ಖಾಸಗೀಕರಣವನ್ನು ಮಾಡುವ ಬಗ್ಗೆ ಗಮನ ಕೊಡಬೇಕು ಮತ್ತು ಕಾರ್ಯಾಚರಣೆಯಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಮಾಡಿಸಬೇಕೆಂಬ ಉದ್ದೇಶವನ್ನು ಸರಕಾರವು ಇಟ್ಟುಕೊಂಡಿದೆ.

ಇನ್ನು ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಉಂಟು ಮಾಡಿ ಇನ್ನೂ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಿ ರಾಜ್ಯದ ಉತ್ಪನ್ನವನ್ನು ಹೆಚ್ಚು ಮಾಡಬೇಕಾಗುತ್ತದೆ.

ಈಗಾಗಲೇ ವಿಶ್ವ ಯೋಜನೆಯಲ್ಲಿ ಆ ಕಾರ್ಯಕ್ರಮದ ಮೂಲಕ ಅದ್ಭುತ ಕಾರ್ಯಕ್ರಮವನ್ನು ಸಾಧಿಸಿದೆ. ಹಳ್ಳಿ ಹಳ್ಳಿಗಳಲ್ಲಿ ನಾವು ಸಾಕಷ್ಟು ಉದ್ಯೋಗಗಳನ್ನು ಗ್ರಾಮೀಣ ಜನತೆಗೆ ಕೊಡಬೇಕಾಗುತ್ತದೆ. ಅಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಆ ಮೂಲಕ ರಾಜ್ಯದ ಉತ್ಪನ್ನವನ್ನು ಹೆಚ್ಚಿಗೆ ಮಾಡಬೇಕು. ರಾಜ್ಯದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಪರ್‌ಕ್ಯಾಪಿಟ ಆದಾಯವನ್ನು ಹೆಚ್ಚಿಗೆ ಮಾಡಬೇಕು.

ಕೈಗಾರಿಕೆಗಳ ಪೈಕಿ ಅನೇಕ ಪಬ್ಲಿಕ್‌ಸೆಕ್ಟಾರ್ ಕೈಗಾರಿಕೆಗಳು ಅನೇಕ ವರ್ಷಗಳಿಂದ ನಷ್ಟ ಅನುಭವಿಸುತ್ತ ಬಂದು ಅವುಗಳಿಂದ ಸರ್ಕಾರದ ಬೊಕ್ಕಸಕ್ಕೆ ತೊಂದರೆಯಾಗಿರುವುದರಿಂದ ಸಂಪೂರ್ಣವಾಗಿ ಅಲ್ಲದಿದ್ದರೂ ಕೆಲವೊಂದು ಕಾರ್ಖಾನೆಗಳನ್ನು ಖಾಸಗೀಕರಣ ಮಾಡಿದರೆ ತಪ್ಪಲ್ಲ. ಪಬ್ಲಿಕ್ ಮತ್ತು ಪ್ರೈವೇಟ್ ಸೆಕ್ಟಾರ್‌ಗಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಹುಟ್ಟಿಸಿ ಹಾನಿಯಾಗುತ್ತಿರುವುದನ್ನು ತಪ್ಪಿಸಿ ಸರ್ಕಾರದ ಉತ್ಪನ್ನ ಹೆಚ್ಚು ಮಾಡಬೇಕೆಂಬುದನ್ನು ಮನಗಂಡು ಖಾಸಗೀಕರಣಕ್ಕೆ ಸ್ವಲ್ಪ ಸ್ಕೋಪ್ ಕೊಟ್ಟಿದೆ. ಇನ್ನು ರಾಜ್ಯಪಾಲರು ತಮ್ಮ ಭಾಷಣದ 15ನೇ ಪ್ಯಾರದಲ್ಲಿ ರಾಷ್ಟ್ರದ ಸಮಸ್ಯೆಯನ್ನು ಹೇಳಿದ್ದಾರೆ. ಕೇವಲ ರಾಜ್ಯಕ್ಕೆ ಸಂಬಂಧಿಸಿದ್ದಷ್ಟೇ ಅಲ್ಲ, ರಾಜ್ಯಗಳಿಗೂ ಸಹ ನಾವು ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ರಾಜ್ಯದಲ್ಲಿನ ಜನಸಂಖ್ಯೆ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟದ ಹೊರತು ರಾಜ್ಯ ಜೀವನ ಮಟ್ಟದ ಸುಧಾರಣೆಗಾಗಿ ಹಮ್ಮಿಕೊಂಡಿರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳು ಫಲ ನೀಡಲಾರವೆಂಬುದು ನನ್ನ ಸರ್ಕಾರದ ದೃಢ ನಂಬಿಕೆಯಾಗಿದೆ ಎಂದಿದ್ದಾರೆ. ಇದರಲ್ಲಿ ಸರ್ಕಾರ ಕೇವಲ ಕಾರ್ಯಕ್ರಮ ಹಾಕಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿದರೆ ಕಾರ್ಯಕ್ರಮ ಯಶಸ್ವಿಯಾಗಲಾರದು. ಇದು ರಾಷ್ಟ್ರೀಯ ಕಾರ್ಯಕ್ರಮ. ಇದರಲ್ಲಿ ಪ್ರತಿಯೊಬ್ಬ ಶಾಸಕರು, ಪ್ರಜೆಯೂ ಪ್ರಮಾಣಿಕವಾಗಿ ಕಳಕಳಿಯಿಂದ ಸಂಪೂರ್ಣ ಸಹಕಾರ ಸಹಾಯ ಮಾಡಿದ್ದೇ ಆದಲ್ಲಿ ಜನನಿಯಂತ್ರಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಲು ಸಾಧ್ಯವಾಗುವುದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬಹಳ ಮಹತ್ವದ ಮತ್ತೊಂದು ಯೋಜನೆಯನ್ನು ನಮ್ಮ ಸರ್ಕಾರ ಕೈಗೊಳ್ಳುತ್ತಾ ಇದೆ. ಮಾನ್ಯ ರಾಜ್ಯಪಾಲರು ಹೋದವರ್ಷ ಕೂಡ ಹೇಳಿದ್ದರು ಈ ವರ್ಷ 16ನೇ ಪ್ಯಾರದಲ್ಲಿ ಹೇಳಿದ್ದಾರೆ. ರಾಜ್ಯದ ಆಡಳಿತ ಯಂತ್ರವನ್ನು ಸರಿಯಾಗಿ ವ್ಯವಸ್ಥೆ ಮಾಡುವುದಕ್ಕಾಗಿ ಪಂಚಸೂತ್ರ ಕಾನೂನನ್ನು ತರಲಿಕ್ಕೆ ಸರ್ಕಾರ ಇಷ್ಟಪಟ್ಟಿದೆ. ಹೋದವರ್ಷವೇ ತಂದು ಆ ಮಸೂದೆ ಜಂಟಿ ಸಲಹಾ ಸಮಿತಿ ಮುಂದಿದೆ. ಆ ಪಂಚಸೂತ್ರದಿಂದ ಆಡಳಿತವನ್ನು ಸರಳಗೊಳಿಸಬೇಕು, ಆಗುತ್ತಿರುವ ಡಿಲೇಯನ್ನು ಕಡಿಮೆಮಾಡಬೇಕೆಂಬ ದೃಷ್ಟಿಯಿಂದ ರಾಜ್ಯದ ಎಲ್ಲಾ ಕಛೇರಿಗಳಲ್ಲೂ ಕೂಡ ಏಕರೂಪದ ಪ್ರಕ್ರಿಯೆ ಆರ್ಥಿಕ ಶಿಸ್ತು ಆಡಳಿತದಲ್ಲಿನ ಮುಖ್ಯ ಅಂಶಗಳಿಗೆ ಅನ್ವಯಿಸುವ ಪಂಚಸೂತ್ರ ತತ್ವಗಳು ಆಡಳಿತ ಸುಧಾರಣೆ ಮಂಡಲಿ ಮತ್ತು ಕಾನೂನುಗಳ ಕ್ರೋಢೀಕರಣಕ್ಕಾಗಿ ಸಮಿತಿಗಳ ಸ್ಥಾಪನೆ ಪ್ರಮಾಣಪತ್ರಗಳ ನೀಡಿಕೆಗಾಗಿ ಪ್ರಕ್ರಿಯೆ, ಕುಂದುಕೊರತೆಗಳ ನಿವಾರಣೆ,ಸಂಶೋಧನೆ, ತರಬೇತಿ ಮತ್ತು ಕಾನೂನು ಪ್ರಕ್ರಿಯದಲ್ಲಿ ಶಿಕ್ಷಣ ನೀಡುವುದು ಸರ್ಕಾರದ ಕಾರ್ಯನೀತಿ ಮತ್ತು ಕಾರ್ಯಕ್ರಗಳಿಗೆ ಸಂಬಂಧಿಸಿದಂತೆ ಜನತೆಯಲ್ಲಿ ಜಾಗೃತಿಯುಂಟು ಮಾಡುವುದು-ಈ ಎಲ್ಲಾ ಅಂಶಗಳನ್ನೊಳಗೊಂಡ ಒಂದು ಪಂಚಸೂತ್ರ ಕಾನೂನನ್ನು ಜಾರಿಗೆ ತಂದು ಆಡಳಿತದಲ್ಲಿರುವ ಕುಂದುಕೊರತೆಗಳನ್ನು ದೂರೀಕರಿಸಬೇಕು, ಬಡಜನರಿಗೆ ನ್ಯಾಯ ಅತಿಶೀಘ್ರವಾಗಿ ಅವರ ಬಾಗಿಲಿಗೆ ಬಂದು ಮುಟ್ಟಬೇಕೆಂಬ ದೃಷ್ಟಿಯಿಂದ ಪಂಚಸೂತ್ರಗಳನ್ನು ಕಾನೂನಾಗಿ ತರುವ ಉದ್ದೇಶವಿದೆ ಜಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ಅದು ಬಂದ ಮೇಲೆ ಅದನ್ನು ಮುಂದಿನ ಅಧಿವೇಶನದಲ್ಲಿಟ್ಟು ತಮ್ಮೆಲ್ಲರ ಸಲಹೆ ಸೂಚನೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕಾನೂನು ತರುವ ಉದ್ದೇಶ ಹೊಂದಿದೆ ಎಂದು ಹೇಳಬಯಸುತ್ತೇನೆ. ಸನ್ಮಾನ್ಯ

ಉಪಾಧ್ಯಕ್ಷಿಣಿಯವರೇ ಹಳ್ಳಿಗಾಡಿನಲ್ಲಿ ನೂರಾರು ವರ್ಷಗಳಿಂದ ತೊಂದರೆಯಿದ್ದುದನ್ನು ಬಗೆಹರಿಸಬೇಕೆಂಬ ದೃಷ್ಟಿಯಿಂದ ಸರ್ಕಾರ ಮತ್ತೊಂದು ಕ್ರಾಂತಿಕಾರಕವಾದ ಕಾರ್ಯಕ್ರಮ ಹಾಕಿಕೊಂಡಿದೆ.

"ಗ್ರಾಮೀಣ ಪ್ರದೇಶಗಳಲ್ಲಿ ಸ್ಮಶಾನಕ್ಕೆ ಸಂಬಂಧಿಸಿದಂತೆ ಜನರ ಅಗತ್ಯೆಯ ಬಗ್ಗೆ ನನ್ನ ಸರ್ಕಾರಕ್ಕೆ ಅರಿವಿದೆ. ನನ್ನ ಸರ್ಕಾರವು ಅಂತಹ ಸೌಕರ್ಯಗಳಿಲ್ಲದ ಗ್ರಾಮಗಳಲ್ಲಿ ಸ್ಮಶಾನಗಳನ್ನು ರಚಿಸುವ ಕಾರ್ಯ ಯೋಜನೆಯನ್ನು ಪ್ರಾರಂಭಿಸುತ್ತಿದೆ" ಇದು ಬಹಳ ಸಣ್ಣದಾಗಿದೆ ಎಂದು ಅನೇಕ ಜನರಿಗೆ ಕಾಣಬಹುದು. ಸನ್ಮಾನ್ಯೇ ಉಪಾಧ್ಯಕ್ಷಿಣಿಯವರೇ, ಅನೇಕ ಗ್ರಾಮಗಳಲ್ಲಿ ಸ್ಮಶಾನಕ್ಕಾಗಿ ಜಮೀನು ಇಲ್ಲದೆ ಬೇರೆ ಯಾರದೋ ಹೊಲದಲ್ಲಿ ಸ್ಮಶಾನವಾಗಿ ಉಪಯೋಗಿಸುವುದಕ್ಕೆ ಹೋಗಿ ಅನೇಕ ತೊಂದರೆಗಳನ್ನು ಅನುಭವಿಸಿರತಕ್ಕಂಥ ಜನರು ಇವತ್ತು ಇದ್ದಾರೆ. ಅದಕ್ಕೋಸ್ಕರ ನಮ್ಮ ಸರ್ಕಾರ ಪ್ರತಿಯೊಂದು ಗ್ರಾಮದಲ್ಲಿಯೂ ಸಹಾ ಸ್ಮಶನಕ್ಕಾಗಿ...

ಶ್ರೀ ಡಿ.ಬಿ. ಚಂದ್ರೇಗೌಡ: ಈಗ ನೀವು 15 ನೇ ಪ್ಯಾರಾವನ್ನು ಹೇಳಿದ್ದೀರಿ. ಜನಸಂಖ್ಯೆ ನಿಯಂತ್ರಣಕ್ಕೂ ಅದಕ್ಕೂ ಇದಕ್ಕೂ ಏನಾದರೂ ಸಂಬಂಧ ಇದೆಯೇ? ಸ್ಮಶಾನದ ಅಭಿವೃದ್ಧಿ ಮತ್ತು 15ನೇ ಪ್ಯಾರಾದಲ್ಲಿರುವ ಜನಸಂಖ್ಯೆಗೂ, ಸಂಬಂಧ ಇದೆಯೇ ಎಂದು ಕೇಳಿದೆ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ವಿರೋಧಿ ಪಕ್ಷದ ನಾಯಕರು ರಾಜ್ಯದ ಜನಸಂಖ್ಯೆ ನಿಯಂತ್ರಣಕ್ಕೂ, ಸರ್ಕಾರ ಕೈಗೊಂಡಿರುವ ಸ್ಮಶಾನದ ವ್ಯವಸ್ಥೆಗೂ ಸಂಬಂಧ ಇದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದಾರೆ. ಸನ್ಮಾನ್ಯ ನಾಯಕರೇ...

ಶ್ರೀ ಎಂ. ಮಹದೇವ್: ಅವರು ಹೇಳಿದ್ದುದು ಜನಸಂಖ್ಯೆ ಜಾಸ್ತಿಯಾಗಿದೆ. ಆದರೆ ಹುಳುವುದಕ್ಕೆ ಭೂಮಿ ಕಡಿಮೆಯಾಗಿ ಘರ್ಷಣೆಗಳಾಗುತ್ತಿದೆ ಎಂದು. ಅದನ್ನು ತಪ್ಪಿಸುವುದಕ್ಕೆ ನಾವು ಜಾಗವನ್ನು ಜಾಸ್ತಿ ಮಾಡಿದ್ದೇವೆ ಎನ್ನುವ ಅರ್ಥದಲ್ಲಿ ಅವರು ಹೇಳಿದ್ದಾರೆ ಅಷ್ಟೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಅದಕ್ಕಾಗಿಯೇ ಸರ್ಕಾರದ ಸುಲಭೋಪಾಯ ಕಾರ್ಯಕ್ರಮ ಎಂದರೆ ಜನಸಂಖ್ಯೆ ಹೆಚ್ಚಾಗುತ್ತಿದೆ, ಸ್ಮಶಾನಗಳನ್ನು ಹೆಚ್ಚು ಮಾಡಿ ಜನಸಂಖ್ಯೆಯನ್ನು ಕಡಿಮೆ ಮಾಡಬೇಕು ಎನ್ನತಕ್ಕಂಥ ಕಾರ್ಯಕ್ರಮವೇನಾದರೂ ಇದೆಯೇ ಎಂದು ಕೇಳಿದ್ದುದು.

ಶ್ರೀ ಕೆ.ಬಿ. ಕೋಳಿವಾಡ್; ಒಂದಕ್ಕೊಂದು ಸಂಬಂಧವನ್ನು ಕಲ್ಪಿಸುವುದಕ್ಕೆ ಹೋಗಬಾರದು. ಏತಕ್ಕೆ ನಾನು ಈ ಮಾತನ್ನು ಹೇಳುತ್ತೇನೆ ಎಂದರೆ ಜನಸಂಖ್ಯೆಯನ್ನು ನಾವು ಕಡಿಮೆ ಮಾಡದೇ ಹೋದರೆ ಕೇವಲ ರಾಜ್ಯವೇ ಅಲ್ಲ, ಇಡೀ ರಾಷ್ಟ್ರ ಬಹಳ ದಿವಸ ನೆಮ್ಮದಿಯಿಂದ ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ವಿಜ್ಞಾನದ ಮುಖಾಂತರವಾಗಿ ಈ ಮೆಡಿಕಲ್ ಸೈನ್ಸ್ ಬಹಳ ಅಡ್ವಾನ್ಸ್ ಆಗಿ ಡೆತ್ ರೇಟ್ ಕಡಿಮೆಯಾಗುತ್ತಿದೆ. ಬರ್ತ್ ರೇಟು ವಿಪರೀತವಾಗಿ ಬೆಳೆಯುತ್ತಿದೆ. ಅದಕ್ಕೋಸ್ಕರ ಪ್ರತಿಯೊಬ್ಬ ಪ್ರಜೆಯೂ ಇದರಲ್ಲಿ ಸಕ್ರೀಯವಾಗಿ ಪಾತ್ರವನ್ನು ವಹಿಸಿದಾಗ ಮಾತ್ರ ಜನ ಸಂಖ್ಯೆ ನಿಯಂತ್ರಣ ಕಾರ್ಯಕ್ರಮ ಯಶಸ್ವಿಯಾಗುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ." ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಏಳಿಗೆಗಾಗಿ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ರಕ್ಷಣೆಗಳನ್ನು ಒದಗಿಸಿದ್ದರೂ ಸಹ ಸಾಲದಾಗಿದೆ. ಶಾಸನಾತ್ಮಕ ಕಾನೂನುಗಳು, ರಕ್ಷಣೆಗಳು ಇದ್ದರೂ ಸಹಿತ ಅನೇಕ ಕಡೆ ಹರಿಜನ ಗಿರಿಜನರಿಗೆ ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ವರ್ಗದವರಿಗೆ ಅನೇಕ ತೊಂದರೆಗಳು, ದೌರ್ಜನ್ಯಗಳು ನಡೆಯುವುದನ್ನು ಅನೇಕ ಸಂದರ್ಭದಲ್ಲಿ ನಾವು ಕಾಣುತ್ತಿದ್ದೇವೆ. ಅದಕ್ಕೋಸ್ಕರ ನಮ್ಮ ಸರ್ಕಾರ ಹೊಸದಾಗಿ "ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಕಮೀಷನ್ ಎಂದು ಕರೆಯಲಾಗುವ ಒಂದು ಉನ್ನತ ಮಟ್ಟದ ಪ್ರಾಧಿಕಾರವನ್ನು ರಚಿಸಲು ಉದ್ದೇಶಿಸಿದೆ. ಇದಕ್ಕೆ ಸಂವಿಧಾನಾತ್ಮಕ, ಶಾಸನಾತ್ಮಕ ಹಾಗೂ ಆರ್ಥಿಕವಾಗಿ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲ್ವಿಚಾರಣೆಯನ್ನು ಮಾಡುವ ಅಧಿಕಾರ ಈ ಪ್ರಾಧಿಕಾರಕ್ಕೆ ಕೊಡಲಿಕ್ಕೆ ನಮ್ಮ ಸರ್ಕಾರ ಉದ್ದೇಶಿಸಿದೆ" ಇದಕ್ಕೆ ಸಂವಿಧಾನಾತ್ಮಕ, ಶಾಸನಾತ್ಮಕ ಹಾಗೂ ಆರ್ಥಿಕವಾಗಿ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲ್ವಿಚಾರಣೆಯನ್ನು ಮಾಡುವ ಮತ್ತು ಈ ರಕ್ಷಣಾ ಕ್ರಮಗಳ ಸಾಮರ್ಥ್ಯದ ಮೌಲ್ಯ ಮಾಪನ ಮಾಡುವ ಅಧಿಕಾರ ಈ ಪ್ರಾಧಿಕಾರಕ್ಕೆ ಕೊಡಲಿಕ್ಕೆ ನಮ್ಮ ಸರ್ಕಾರ ಉದ್ದೇಶಿಸಿದೆ. ಆಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಲುವಾಗಿ ಹೊಸದಾಗಿ ಈ ಹಿಂದೆ ಇಲ್ಲದೇ ಇರತಕ್ಕಂಥ ಕಮೀಷನ್ ಎಂದು ಕರೆಯಲಾಗುವ ಒಂದು ಉನ್ನತ ಮಟ್ಟದ ಒಂದು ಪ್ರಾಧಿಕಾರವನ್ನು ಸ್ಥಾಪನೆ ಮಾಡಿ ಜವಾಬ್ದಾರಿಯನ್ನು ಅದಕ್ಕೆ ವಹಿಸುವುದಕ್ಕೆ ನಮ್ಮ ಸರ್ಕಾರ ಉದ್ದೇಶಿಸಿದೆ ಎನ್ನತಕ್ಕಂಥ ಮಾತನ್ನು ಈಗ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದರ ಜೊತೆಗೆ ರೋಸ್ಟರ್ ಪದ್ಧತಿಯನ್ನು ಜಾರಿಗೆ ತರದೇ ಇರತಕ್ಕಂಥದ್ದನ್ನು ಅನೇಕ ಸಂದರ್ಭಗಳಲ್ಲಿ ನಾವು ಕಾಣುತ್ತಿದ್ದೇವೆ. 1978ರಿಂದಲೇ ಯಾವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾಗಿಟ್ಟಂಥ ಹುದ್ದೆಗಳಿಗೆ ಯಾವ ಜಾಗಗಳಲ್ಲಿ ಅವರನ್ನು ತುಂಬಿಲ್ಲವೋ ಅಲ್ಲಿ ಬ್ಯಾಕ್ ಲಾಗ್ ಎನ್ನತಕ್ಕಂಥದ್ದನ್ನು ನಿರ್ಮಿಸಿ ಆ ಹುದ್ದೆಗಳಿಗೆ ಅವರನ್ನೇ ತೆಗೆದುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗಾಗಿ ಸರ್ಕಾರ ಈಗಾಗಲೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಅದರ ಜೊತೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಲ್ಲಿ ಪ್ರತಿಭಾವಂತ ಹುಡುಗರನ್ನು ನೇರವಾಗಿ ನೌಕರಿಗೆ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಉದ್ದೇಶ ಮೊದಲಿಂದಲೂ ಇದೆ. ಅಷ್ಟು ಪ್ರಗತಿಪರವಾದಂಥ ಒಂದು ಕಾರ್ಯಕ್ರಮ ಜರುಗಿದೆಯೇ ಇಲ್ಲವೋ ಎನ್ನತಕ್ಕಂಥದ್ದನ್ನು ಸ್ವಲ್ಪ ನೋಡಬೇಕಾಗಿದೆ. ಅದು ಕಡಿಮೆಯಾಗದಿದ್ದರೆ ನಮ್ಮ ಸರ್ಕಾರ ಅದನ್ನು ಕೂಡಲೇ ಕಾರ್ಯಕ್ರಮಕ್ಕೆ ತೆಗೆದುಕೊಂಡು ಫಸ್ಟ್ ರ್‍ಯಾಂಕ್, ಸೆಕೆಂಡ್ ರ್‍ಯಾಂಕ್, ಥರ್ಡ್ ರ್‍ಯಾಂಕ್ ಬಂದಂಥ ವಿಶ್ವವಿದ್ಯಾನಿಲಯಗಳಿಂದ ಹೊರಬಂದಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೇರವಾಗಿ ನೌಕರಿಯನ್ನು ಕೊಡತಕ್ಕಂಥದ್ದರಲ್ಲಿ ಸಕ್ರೀಯವಾಗಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ನಮ್ಮ ಸರ್ಕಾರ ಹಿಂದುಳಿದ ವರ್ಗದವರ ಸಲುವಾಗಿ ಈಗಾಗಲೇ ಚಿನ್ನಪ್ಪರೆಡ್ಡಿ ಆಯೋಗವನ್ನು ತತ್ವಶಃ ಒಪ್ಪಿದೆ. ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ. ಅದರ ಜೊತೆಗೆ ಖಾಯಂ ಹಿಂದುಳಿದ ವರ್ಗದವರ ಆಯೋಗವನ್ನು ನೇಮಕಮಾಡುವುದರಲ್ಲೂ ಸಹಿತ ನಮ್ಮ ಸರ್ಕಾರ ಉದ್ದೇಶವನ್ನು ಇಟ್ಟುಕೊಂಡಿದೆ. ಅದರ ಜೊತೆಗೆ ಸಮಾಜದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗಿಂತಲೂ ಹೆಚ್ಚು ತುಳಿಯಲ್ಪಟ್ಟಂತಹ ಹೆಚ್ಚು ಹಿಂದುಳಿದಿರತಕ್ಕಂಥ ಹೆಣ್ಣು ಮಕ್ಕಳಿಗಾಗಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಅನೇಕ ವಿದ್ಯಾವಂತ ಮಹಿಳೆಯರು ಮಾತ್ರ ಸಮಾಜದಲ್ಲಿ ಮುಂದೆ ಬಂದಿದ್ದಾರೆ. ಹಾಗೆಯೇ ಹಳ್ಳಿಗಾಡಿನ ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ನೋಡಿದರೆ ಆ ಹೆಣ್ಣುಮಕ್ಕಳು ಕೇವಲ ತಮ್ಮ ಗಂಡಂದಿರನ್ನು ಮಕ್ಕಳನ್ನು ಜೋಪಾನಮಾಡುವುದು,ಅವರಿಗೆ ಕೆಲಸ ಮಾಡಿಕೊಡುವುದು,

ಹೀಗೆ ನಾಲ್ಕು ಗೋಡೆಗಳ ಮಧ್ಯದಲ್ಲಿ ಇರತಕ್ಕಂಥಹ ಹೆಣ್ಣುಮಕ್ಕಳನ್ನು ಸಂಪೂರ್ಣವಾಗಿ ತುಳಿಯಲ್ಪಟ್ಟಂತಹ ಈ ಸಮಾಜದ ಬಗ್ಗೆ ಗಮನಹರಿಸಬೇಕು. ನಮ್ಮ ಸರ್ಕಾರ ಅದಕ್ಕೂ ಸಹಿತ ಮಹಿಳೆಯರ ಮೇಲಿನ ದೌರ್ಜನ್ಯವನ್ನು, ಬಾಲ್ಯವಿವಾಹ, ವರದಕ್ಷಿಣೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಖಾಯಂ ಮಹಿಳಾ ಆಯೋಗ ಒಂದನ್ನು ರಚಿಸಬೇಕು ಎನ್ನತಕ್ಕಂಥಹ ಮಹೋನ್ನತ ಉದ್ದೇಶವನ್ನು ನಮ್ಮ ಸರ್ಕಾರ ಇಟ್ಟುಕೊಂಡಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ನನಗೆ ಹೆಮ್ಮೆ ಎನ್ನಿಸುತ್ತದೆ.

ಇನ್ನು ವಿದ್ಯಾ ಕ್ಷೇತ್ರದಲ್ಲಿ ಈ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಹೋದವರ್ಷ ದಕ್ಷಿಣ ಕನ್ನಡ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಅದನ್ನು ಸಂಪೂರ್ಣವಾಗಿ ಸಾಕ್ಷರತಾ ಜಿಲ್ಲೆಯನ್ನಾಗಿ ಮಾಡಲಾಗಿದೆ.eradication of lilliteracy. ಈ ಕಾರ್ಯಕ್ರಮದಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿತ್ತು. ಇನ್ನು ಈ ವರ್ಷ ತುಮಕೂರು, ಶಿವಮೊಗ್ಗ, ಬೀದರ್, ಬಿಜಾಪುರ, ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಆದಷ್ಟು ಬೇಗನೆ ಅನರಕ್ಷರತೆಯನ್ನು ಹೋಗಲಾಡಿಸುವ ಸಲುವಾಗಿ ಸರ್ಕಾರ ಸಂಪೂರ್ಣವಾಗಿ ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಅನೇಕ ಗೊಂದಲಮಯವಾದಂತಹ ವಾತಾವರಣಗಳು ಉಂಟಾಗಿದೆ. ಆದರೆ ನಮ್ಮ ಸರ್ಕಾರ ಬಂದಮೇಲೆ ಯಾವುದೇ ಕಮಿಟಿಗಳು ಇಲ್ಲದೆ ಅವರ ಅಂಕಗಳ ಆಧಾರದ ಮೇಲೆ ಮೆರಿಟ್‌ಗಳ ಮೇಲೆ ಹಾಗೂ ಅವರ ವಯಸ್ಸಿನ ಮೇಲೆ ನೇರವಾಗಿ ಎಂಪ್ಲಾಯಿಮೆಂಟ್ ಮುಖಾಂತರ ಅವರ ನಂಬರ್‌ಗಳನ್ನು ತರಿಸಿ ನೇರವಾಗಿ ಯಾವುದೇ ಡಿಸ್ಕ್ರಿಮಿನೇಷನ್ ಇಲ್ಲದೆ ಅಪಾಯಿಂಟ್‌ಮೆಂಟ್ ಮಾಡಿದಂತಹ ಉದಾಹರಣೆಗಳು ನಮ್ಮಲ್ಲಿವೆ. ಮುಂದೆಯೂ ಸಹಿತ ಪ್ರಾಥಮಿಕ ಶಿಕ್ಷಕರನ್ನು ಮಾಧ್ಯಮಿಕ ಶಿಕ್ಷಕರನ್ನು ನೇಮಿಸುವಾಗಲೂ ಸಹಿತ ಅದೇ ಪದ್ಧತಿಯನ್ನು ಅನುಸರಿಸಬೇಕೆನ್ನತಕ್ಕ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ.ಅದರಲ್ಲಿ ಹಳ್ಳಿಗಾಡಿನಿಂದ ಬಂದಂತಹ ಜನರಿಗಾಗಿ 15 ಅಂಕಗಳನ್ನು ಹೆಚ್ಚು ಕೊಟ್ಟು ಅವರಿಗೆ ಪ್ರೋತ್ಸಾಹಿಸಬೇಕು ಎನ್ನತಕ್ಕ ದೃಷ್ಟಿಯಿಂದ ಸರ್ಕಾರ ಕಾರ್ಯಕ್ರಮ ಹಾಕಿಕೊಂಡು ಈ ನಿರ್ಧಾರಮಾಡಿದೆ. ಇದರ ಜೊತೆಯಲ್ಲಿ ನಮ್ಮ ಸರ್ಕಾರ ಪಬ್ಲಿಕ್ ಡಿಸ್ಟ್ರಿಬ್ಯೂಷನ್‌ನಲ್ಲಿ ಬಡಜನರಿಗಾಗಿ ಆಹಾರಧಾನ್ಯ ಸಕ್ಕರೆ, ಎಣ್ಣೆ ಹಂಚತಕ್ಕಂಥಹ ವ್ಯವಸ್ಥೆಯಲ್ಲಿ ಈಗಿರತಕ್ಕ ತೊಂದರೆಯನ್ನು ನಿವಾರಿಸಬೇಕು. ಹಸಿರು ಕಾರ್ಡಿನ ಹಂಚಿಕೆಯಲ್ಲಿ ಬಹಳ ತೊಂದರೆಯಾಗಿದೆ. ಅನೇಕ ಶ್ರೀಮಂತರಿಗೆ ಹಸಿರುಕಾರ್ಡುಗಳು ಸಿಕ್ಕಿವೆ. ಬಡವರಿಗೆ ಇನ್ನೂ ಸಿಕ್ಕಿಲ್ಲ. ತ್ವರಿತಗತಿಯಿಂದ ಈ ಕಾರ್ಡ್‌ಗಳನ್ನು ಬದಲಾಯಿಸಿ ಹೊಸ ಪಡಿತರ ಚೀಟಿಗಳನ್ನು ತಂದು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಮುಖಾಂತರ ಬಡ ಜನರಿಗೆ ಮುಟ್ಟುವಂತೆ ಸರ್ಕಾರ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತಿದೆ. ಎನ್ನತಕ್ಕ ಮಾತನ್ನು ಇಲ್ಲಿ ಹೇಳಿದ್ದನ್ನು ಸ್ಮರಿಸಿ ಇದಕ್ಕೆ ನಾವು ಆದಷ್ಟು ಬೇಗನೇ ಈ ಕಾರ್ಯಕ್ರಮವನ್ನು ಕೈಗೊಳ್ಳಲಿ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅನೇಕ ಜನ ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತಿಯ ಬಗ್ಗೆ ಮಾತನಾಡಿದ್ದಾರೆ. ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಿಸಿದ್ದಾರೆ. ಈ ಸರ್ಕಾರ ಚುನಾವಣೆಗಾಗಿ ಏನೂ ಪ್ರಯತ್ನ ಮಾಡಿಲ್ಲ ಎನ್ನತಕ್ಕ ಮಾತನ್ನು ರಾಜ್ಯಪಾಲ ಭಾಷಣದ ಮೇಲೆ ಹೊರಗಡೆ ಟೀಕೆ ಮಾಡಿದ್ದನ್ನು ನಾನು ಓದಿದ್ದೇನೆ. ಆದರೆ ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನನ್ನ ಸರ್ಕಾರವು ಒಂದು ಕ್ರಾಂತಿಕಾರಕ ಪಂಚಾಯತ್ ರಾಜ್ ವಿಧೇಯಕವನ್ನು ತರಲು ಉದ್ದೇಶಿಸಿದೆ.

ಉದ್ದೇಶಿತ ಹೊಸ ವಿಧೇಯಕದಲ್ಲಿ ರಾಜಕೀಯ ಮತ್ತು ಆಡಳಿತ ವಿಕೇಂದ್ರೀಕರಣವನ್ನು ತರಲು ಮತ್ತು 1991ರಲ್ಲಿ ನಡೆಸಲಾದ ಜನಗಣತಿ ಆಧಾರದ ಮೇಲೆ ಮತ ಕ್ಷೇತ್ರಗಳ ವಿಂಗಡಣೆ ತರುವಾಯ ಚುನಾವಣೆಗಳನ್ನು ಆದಷ್ಟು ಶೀಘ್ರವಾಗಿ ನಡೆಸಲು ಸರ್ಕಾರ ಉದ್ದೇಶಿಸಲಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿಗಳ ಅನುಭವವನ್ನು ಕಳೆದ ಐದು ವರ್ಷಗಳಿಂದ ನಾವು ನೋಡಿದ್ದೇವೆ. ಅದರಲ್ಲಿ ಎಷ್ಟು ಲೋಪ-ದೋಷಗಳಿವೆ, ಎಷ್ಟು ಕಾನೂನಿನ ತೊಂದರೆ ಇದೆಯೆಂದು ಕೆಲವು ಸಂದರ್ಭಗಳಲ್ಲಿ ನಮಗೆ ಅನ್ನಿಸುತ್ತಿತ್ತು. ಕರಪ್ಷನ್ ಡಿ-ಸೆಂಟ್ರಲೈಜೇಷನ್ ಆಗಿತ್ತೇ ಅಥವಾ ಪವರ್-ಡಿ-ಸೆಂಟ್ರಲೈಜೇಶನ್ ಆಗಿತ್ತೇ. ಎನ್ನತಕ್ಕಂಥ ಅನುಮಾನ ಜನರಿಗೆ ಬರುತ್ತಿತ್ತು. ಅದಕ್ಕೋಸ್ಕರ ಅಂತಹ ಕುಂದು-ಕೊರತೆಗಳನ್ನು ಹೋಗಲಾಡಿಸಿ, ಡಿ-ಸೆಂಟ್ರಲೈಜೇಶನ್ ತಪ್ಪಿಸಿದ ನಂತರ ಸಂಪೂರ್ಣ ವಿಶ್ವಾಸ ನಮ್ಮ ಸರ್ಕಾರದ ಮೇಲಿದೆ. ಇನ್ನು ಹೆಚ್ಚು ಮಂಡಲಗಳನ್ನು, 15-20 ಹಳ್ಳಿಗಳು ಕೂಡುವ ಮಂಡಲಗಳನ್ನು ಮಾಡಿ ಅಧಿಕಾರ ಕೊಡುವುದಕ್ಕೆ ನಮ್ಮ ಸರ್ಕಾರ ಉದ್ದೇಶಿಸಿದೆ. ಅದಕ್ಕಿಂತ ಸಣ್ಣದಾದಂಥ ಮಂಡಲಗಳನ್ನು ಮಾಡಿ ಹೆಚ್ಚೆಚ್ಚು ಅಧಿಕಾರವನ್ನು ಹಳ್ಳಿಯ ಮಟ್ಟದಲ್ಲಿ ಡಿ-ಸೆಂಟ್ರಲೈಜೇಶನ್ ಮಾಡಿ ಕೊಡಬೇಕು ಎನ್ನತಕ್ಕಂಥ ಉದ್ದೇಶದಿಂದ ಐದು ವರ್ಷಗಳಲ್ಲಿ ಆದ ಅನಾನುಕೂಲವನ್ನು, ಕಾನೂನಿನ ತೊಂದರೆಯನ್ನು, ಆಡಳಿತಾತ್ಮಕ ತೊಂದರೆಯನ್ನು ನಿವಾರಣೆ ಮಾಡಿ, ಈ ಹೊಸ ಕ್ಷೇತ್ರಗಳೇ ಪುನರ್ ವಿಂಗಡಣೆ ಮಾಡಿ ಆದಷ್ಟು ಬೇಗನೆ ಚುನಾವಣೆಯನ್ನು ಸರ್ಕಾರ ಘೋಷಿಸುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಮಾನ್ಯ ರಾಜ್ಯಪಾಲರು ಕೊನೆಯದಾಗಿ ಲೋಕ ಅದಾಲತ್ ಬಗ್ಗೆ ಹೇಳಿದ್ದಾರೆ. ಲೋಕ ಅದಾಲತ್‌ಗಳಿಂದ ತಾವೆಲ್ಲಾ ನೋಡಿದ್ದೀರಿ. ಕಾನೂನು ಬಹಳ ಕೋರ್ಟ್‌ಗಳಲ್ಲಿ ಡಿಲೇ ಆಗುತ್ತಿದೆ. ಡಿಲೇ ಎಂದರೆ ಒಂದು ಕೋರ್ಟಿನ ಬಾಗಿಲನ್ನು ಹತ್ತಿ ಬಿಟ್ಟರೆ ಜೀವನಪರ್ಯಂತ ಕೋರ್ಟ್‌ಗಳಲ್ಲೇ ಸಾಯಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮಹಿರಿಯರು ಹೇಳುತ್ತಿದ್ದರು. ಗೆದ್ದವನು ಸೋತ, ಸೋತವನು ಸತ್ತ ಎಂದು. ಇದನ್ನು ಹೋಗಲಾಡಿಸಬೇಕು. ಲೋಕ ಅದಾಲತ್‌ಗಳ ಮುಖಾಂತರ ಒಬ್ಬರನ್ನೊಬ್ಬರನ್ನು ಕರೆಯಿಸಿ ಪರಸ್ಪರ ಮಾತನಾಡಿ ಕಾಂಪ್ರಮೈಸ್ ಮಾಡಿ ನ್ಯಾಯಗಳನ್ನು ಬಗೆಹರಿಸಬೇಕೆನ್ನುವ ದೃಷ್ಟಿಯಿಂದ ನಮ್ಮ ಸರ್ಕಾರ 674 ಲೋಕ ಅದಾಲತ್‌ಗಳನ್ನು ನಡೆಸಿ, ಅನೇಕ ನ್ಯಾಯಗಳನ್ನು, ಮೊಕದ್ದಮೆಗಳನ್ನು ಬಗೆಹರಿಸಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ, ಇದು ಬಹಳ ಅವಶ್ಯಕವಾದಂಥಾದ್ದು ಎಂದು ಹೇಳಿ ಇದರ ಜೊತೆಗೆ ನಾನು ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಯಾವ ಮೋಟಾರ್ ವೆಹಿಕಲ್ ಕಾನೂನನ್ನು ಈ ಅಪರಾಧದಲ್ಲಿ ಅಳವಡಿಸಿದ್ದಿರೋ ಅದೇ ರೀತಿಯಾಗಿ ಈ ಲ್ಯಾಂಡ್ ಅಕ್ವಿಜಿಶನ್ ಕೇಸ್‌ಗಳನ್ನೂ ಸಹ ಅಳವಡಿಸಬೇಕು. ಉದಾಹರಣೆಗೆ ನಾವು ಸುಮಾರು 20-30 ವರ್ಷಗಳಿಂದ ನಡೆದಂಥ ಕೇಸ್‌ಗಳನ್ನು ಕೋರ್ಟ್‌ಗಳಲ್ಲಿ ನೋಡುತ್ತಿದ್ದೇವೆ. ಅದಕ್ಕೋಸ್ಕರ ಈ ಲೋಕ್ ಅದಾಲತ್‌ನಲ್ಲಿ ಲ್ಯಾಂಡ್ ಅಕ್ವಿಜಿಶನ್ ಕೇಸ್‌ಗಳನ್ನೂ ಸಹಾ ಅಳವಡಿಸಿ ಜನರಿಗೆ ಆಧಷ್ಟು ಬೇಗ ನ್ಯಾಯ ದೊರೆಯುವ ರೀತಿಯಲ್ಲಿ ಸರ್ಕಾರ ಕಾರ್ಯಕ್ರಮ ಕೈಗೊಳ್ಳುತ್ತಿದೆ ಎನ್ನುವ ಮಾತನ್ನು ಹೇಳುತ್ತಾ, ಒಟ್ಟಿಗೆ ನಮ್ಮ ಸರ್ಕಾರ ಬಡವರ ಬಗ್ಗೆ ಅನುಕಂಪದಿಂದ, ಬಡವರ ಕಷ್ಟ-ಕಾರ್ಪಣ್ಯಗಳನ್ನು ಅರಿತಂಥ, ಬಡವರ ಕುಂದು-ಕೊರತೆಗಳಿಗೆ ಸ್ಪಂಧಿಸುವಂಥ ಹೃದಯ ಇಟ್ಟುಕೊಂಡು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಸನ್ಮಾನ್ಯ ರಾಜ್ಯಪಾಲರ ಈ ಭಾಷಣದ ಮುಖಾಂತರ ಸರ್ಕಾರದ ಯೋಜನೆಗಳು, ನೀತಿಗಳು, ತತ್ವಗಳನ್ನು ಕರ್ನಾಟಕದ ಸಮಗ್ರ ನಾಲ್ಕು ಕೋಟಿ ಜನತೆಯ ಮುಂದಿಟ್ಟಿದ್ದಾರೆ. ಅದೇ ರೀತಿಯಾಗಿ ತತ್ವಶಃ ನಡೆದುಕೊಂಡು ಮುಂದಿನ

ವರ್ಷದ ಅವಧಿಯಲ್ಲಿ ಪ್ರಾಮಾಣಿಕವಾಗಿ ಬಡ ಜನರ ಕಷ್ಟವನ್ನು ನಿವಾರಿಸುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನತಕ್ಕಂಥ ವಿಶ್ವಾಸದೊಂದಿಗೆ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಚರ್ಚೆಯನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ.

+ ಶ್ರೀಮತಿ ಮೋಟಮ್ಮ (ಮೂಡಿಗೆರೆ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇವೊತ್ತು ಮಾನ್ಯ ಕೆ.ಬಿ. ಕೋಳಿವಾಡರವರು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಮಂಡಿಸಿದ್ದಾರೆ. ನಾನು ಅದನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರು ಭಾಷಣ ಮಾಡಿದ ನಂತರ ಕೆಲವರು ಹಿರಿಯ ಸದಸ್ಯರು ಆ ಕಡೆಯಿಂದ ಕಾಮೆಂಟ್ಸ್ ಮಾಡಿದರು ಎಂದು ಕೇಳಿದೆ. ಏನೆಂದರೆ, ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಏನೂ ಸತ್ವ ಇಲ್ಲ ಬಹಳ ನಿರಾಶದಾಯಕವಾಗಿತ್ತು, ಹೊಸ ಯೋಜನೆಗಳು ಏನೂ ಕೊಟ್ಟಿಲ್ಲವೆಂದು ಹೇಳಿ ಮಾತನಾಡಿದ್ದನ್ನೂ ಕೇಳಿದೆ. ಆ ಕಾಮೆಂಟ್ಸ್ ಪೇಪರ್‌ನಲ್ಲೂ ಕೂಡ ಬಂದಿತ್ತು. ಈಗಾಗಲೇ ಸಾಕಷ್ಟು ಉತ್ತಮವಾದ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ಜೊತೆಗೆ ಬಹಳ ಮುಖ್ಯವಾಗಿ ಕೆಲವೊಂದು ವಿಷಯಗಳನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಇದಕ್ಕಿಂತ ಇನ್ನು ಯಾವ ಬಹಳ ಮುಖ್ಯವಾದ ವಿಷಯವನ್ನು ಅಥವಾ ಯೋಜನೆಯನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಎನ್ನುವುದು ನನಗೆ ಅರ್ಥವಾಗಲಿಲ್ಲ. ರಾಜ್ಯಪಾಲರ ಭಾಷಣದಲ್ಲಿ, ಕೆಲವು ಯೋಜನೆಗಳ ಬಗ್ಗೆ ನಾವು ಗಮನಹರಿಸಿದಾಗ, ಬಹಳ ಮುಖ್ಯವಾಗಿ ನಾವು ವಿಚಾರ ಮಾಡತಕ್ಕಂಥದ್ದು, ಅವರೂ ಸಹ ಮೆಚ್ಚಿಗೆಯನ್ನು ವ್ಯಕ್ತಪಡಿಸಿರತಕ್ಕ ವಿಷಯವೇನೆಂದರೆ, ನಮ್ಮ ಸರ್ಕಾರ ಈ ದೇಶದ ಈ ರಾಜ್ಯದ ಬಡ ಜನರಿಗಾಗಿ ಆಶ್ರಯ, ಅಕ್ಷಯ, ವಿಶ್ವ, ಆರಾಧನ ಮುಂತಾದ ಕಾರ್ಯ ಕ್ರಮಗಳನ್ನು ಹಾಕಿಕೊಂಡಿದೆ. ಇದರ ಬಗ್ಗೆ ನಾವು ಬಹಳ ಮುಖ್ಯವಾಗಿ ಗಮನಹರಿಸಬೇಕಾಗುತ್ತದೆ. ನನ್ನ ಮೊದಲನೆಯ ಪ್ರಶ್ನೆ ಏನೆಂದರೆ, ಆಶ್ರಯಕ್ಕಿಂತ ಉತ್ತಮವಾದ ಯೋಜನೆ ಈ ರಾಜ್ಯದ ಬಡಜನರಿಗೆ ಬೇರೆ ಯಾವುದು ಬೇಕು? ಸಾಮಾನ್ಯ ಜನರಿಗೆ ಒಂದು ಗುಂಟೆ ಜಾಗ ಮನೆಕಟ್ಟಿಕೊಳ್ಳಲು ಇದುವರೆಗೂ ಸಿಗದಿದ್ದಾಗ, ನಮ್ಮಸರ್ಕಾರ ಮುಂದೆ ಬಂದು ಸಾವಿರಾರು ಜನರಿಗೆ ನಿವೇಶನವಿಲ್ಲದ ಜನರಿಗೆ, ನಿವೇಶನವನ್ನು ಕೊಟ್ಟಿದೆ. ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಸಾವಿರ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿ ಅನೇಕ ಉತ್ತಮವಾದ ಕಾರ್ಯಕ್ರಮಗಳನ್ನು ಹಾಕಿದಾಗ, ಇದಕ್ಕಿಂಥ ಉತ್ತಮವಾದ ಬೇರೆಯಾವ ಕಾರ್ಯಕ್ರಮವನ್ನು ಬಡವರಿಗೆ ಮಾಡಬೇಕಾಗಿತ್ತು ಎನ್ನುವುದನ್ನು ನಮ್ಮ ಎದುರುಗಡೆ ಕುಳಿತಿರತಕ್ಕ ನಾಯಕರುಗಳು ಹೇಳಿದರೆ ಕೇಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ: ಸ್ಮಶಾನಕ್ಕೆ ಜಮೀನನ್ನು ಒತ್ತುವರಿ ಮಾಡಿಕೊಳ್ಳೋದೆ?

ಶ್ರೀಮತಿ ಮೋಟಮ್ಮ: ಹೌದು, ಅದು ಬಹಳ ಮುಖ್ಯವಾಗಿ ಯೋಚನೆ ಮಾಡಬೇಕಾದ ಸಂಗತಿ. ನಾವು ಆ ವಿಷಯವನ್ನು ಬಹಳ ಹಗುರವಾಗಿ ತೆಗೆದುಕೊಳ್ಳುತ್ತೇವೆ. ಇಡೀ ರಾಜ್ಯದಲ್ಲಿ ಹಂಚಲು ಜಮೀನಿಲ್ಲವೆಂದರೆ, ಬಡವರು ಸತ್ತರೆ ಸುಡಲು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ?

ಶ್ರೀ ಡಿ.ಬಿ.ಚಂದ್ರೇಗೌಡ: ನಿಮ್ಮ ಕ್ಷೇತ್ರದಲ್ಲಿ ಎಷ್ಟು ಮನೆಗಳಾಗಿವೆ?

ಶ್ರೀಮತಿ ಮೋಟಮ್ಮ: ನಮ್ಮ ಕ್ಷೇತ್ರದಲ್ಲಿ ಈಗಾಗಲೇ ಕಾರ್ಯಕ್ರಮ ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಮೂರು ಸಾವಿರ ನಿವೇಶನಗಳನ್ನು ವಿತರಣೆ ಮಾಡಿದ್ದೇವೆ. ಈ ವರ್ಷದಲ್ಲಿ ಇನ್ನೂ 5 ಸಾವಿರ ನಿವೇಶನಗಳನ್ನು ವಿತರಣೆ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಮಾನ್ಯ ಡಿ.ಬಿ. ಚಂದ್ರೇಗೌಡರು ಸ್ಮಶಾನವನ್ನು ಮಾಡುವುದು ಒಂದು ದೊಡ್ಡ ಯೋಜನೆಯೇ ಎಂದು ಪ್ರಶ್ನೆಯನ್ನು ಕೇಳಿದರು. ನಿಜವಾಗಿಯೂ ಪ್ರತಿಯೊಬ್ಬರು ಅದನ್ನು ಯೋಚನೆ ಮಾಡಬೇಕು. ಏಕೆಂದರೆ ನಾವು ಆ ಹಂತದಲ್ಲಿ ಯೋಚನೆ ಮಾಡುವುದಿಲ್ಲ. ನಾವು ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ, ದೊಡ್ಡ ದೊಡ್ಡ ಕಾರ್ಯಕ್ರಮಗಳ ಬಗ್ಗೆ ಚಿಂತನೆ ಮಾಡುತ್ತೇವೆ. ಬಡವನು ಸತ್ತರೆ ಹೂಳಲು ಜಾಗವಿಲ್ಲ ಇದರ ಬಗ್ಗೆ ಎಷ್ಟು ಜನರು ಯೋಚನೆ ಮಾಡುತ್ತಾರೆ ಉಪಾಧ್ಯಕ್ಷಣಿಯರೆ ನಿಜವಾಗಿಯೂ ಜಮೀನು ಇದ್ದವರು ತಮ್ಮ ತಮ್ಮ ಹಿರಿಯರು ಸತ್ತರೆ ತೆಗೆದುಕೊಂಡು ಹೋಗಿ ಅವರ ಜಮೀನಿನಲ್ಲಿ ಶವಸಂಸ್ಕಾರವನ್ನು ಮಾಡುತ್ತಾರೆ. ಆದರೆ ಜಮೀನಿಲ್ಲದ ಬಡವನನ್ನು ಎಲ್ಲಿ ಹೂಳಬೇಕು? ರಸ್ತೆಯಲ್ಲಿ ಹೂಳಬೇಕಾಗುತ್ತದೆ.

ಇದಲ್ಲದೆ ಏಷ್ಟೋ ಹಳ್ಳಿಗಳಲ್ಲಿ ಸ್ಮಶಾನವನ್ನು ಒತ್ತವರಿ ಮಾಡಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ಅದರಲ್ಲಿಯೂ ನಮ್ಮ ಕಡೆಯಲ್ಲಿ ಕಾಫಿ ತೋಟವನ್ನೇ ಮಾಡುತ್ತಿದ್ದಾರೆ. ಅದು ಡಿ.ಬಿ. ಚಂದ್ರೇಗೌಡರಿಗೂ ಸಹ ಗೊತ್ತು. ದಿನಬೆಳಗಾದರೆ ಸ್ಮಶಾನವನ್ನು ಬಿಡಿಸಿಕೊಡಿ, ಒತ್ತುವರಿ ಮಾಡಿ ಕಾಫಿ ಗಿಡವನ್ನು ಹಾಕುತ್ತಿದ್ದಾರೆಂದು ಜನ ಕೇಳುತ್ತಾರೆ. ಮರುದಿನ ಬೆಳಿಗ್ಗೆ ಗಿಡವನ್ನು ನೆಟ್ಟು ಬೇಲಿಯನ್ನು ಹಾಕಿರುತ್ತಾರೆ. ಇಂತರ ಒಂದು ಪರಿಸ್ಥಿತಿಯಲ್ಲಿ, ಇಂತಹ ಒಂದು ಕಾರ್ಯನಡೆಯುತ್ತಿರಬೇಕಾದರೆ ನಾವು ಬಡವರಿಗೆ ಸ್ಮಶಾನಕ್ಕೆಂದು ಜಮೀನನ್ನು ರಿಸರ್ವ್ ಮಾಡುವುದು ಉತ್ತಮ ಕಾರ್ಯವಲ್ಲವೆಂದು ಹೇಳಿದರೆ, ನನಗೆ ನಿಜವಾಗಿಯೂ ಅದಕ್ಕೆ ಏನು ಹೇಳಬೇಕೆಂದು ಅರ್ಥವಾಗುತ್ತಿಲ್ಲ. ಆಶ್ರಯ ಯೋಜನೆಯಡಿಯಲ್ಲಿ ಈಗಾಗಲೇ ನಾವು ಒಂದು ಲಕ್ಷದ ಇಪ್ಪತ್ತೈದು ಸಾವಿರ ಮನೆಗಳನ್ನು ಕಟ್ಟಬೇಕೆಂದು ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಅದಕ್ಕೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಮುಂದೆ ಈ ಸರ್ಕಾರ ಇರಲಿ. ಹೋಗಲಿ ಯಾವುದೇ ಸರ್ಕಾರ ಬಂದರೂ ಕೂಡ ಶಾಶ್ವತವಾಗಿ ಈ ಕಾರ್ಯಕ್ರಮವನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ, ಜನ ಅದಕ್ಕೆ ಬಿಡುವುದಿಲ್ಲ. ಜನರು ಈ ಕಾರ್ಯಕ್ರಮವನ್ನು ಮುಂದುವರಿಸಬೇಕೆಂದು ಒತ್ತಾಯ ಮಾಡುತ್ತಾರೆ. ಆದುದರಿಂದ ಈ ಕಾರ್ಯಕ್ರಮ ಈ ರಾಜ್ಯದಲ್ಲಿ ಹೆಚ್ಚು ಜನಪ್ರಿಯವಾಗಿದೆ, ಈಗ ದೇಶದಲ್ಲಿ ಜನಪ್ರಿಯವಾಗುತ್ತದೆ ಎಂದರೆ ತಪ್ಪಾಗಲಾರದು. ಮಾನ್ಯ ಉಪಾಧ್ಯಕ್ಷಿಣಿಯರೆ, ತಮಗೆ ಗೊತ್ತಿರುವಂತೆ, ನಮ್ಮ ನೆಚ್ಚಿನ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರ ಇಚ್ಛೆಯೂ ಇದೇ ಆಗಿತ್ತು. ನಿವೇಶನವಿಲ್ಲದವರಿಗೆ ನಿವೇಶನವನ್ನು ಕೊಡುವುದು, ಮನೆಗಳಿಲ್ಲದವರಿಗೆ ಮನೆಗಳನ್ನು ಕಟ್ಟಿಸಿ ಕೊಡತಕ್ಕ ಕಾರ್ಯಕ್ರಮವನ್ನು ಇಡೀ ದೇಶದಲ್ಲಿ ಎಲ್ಲೂ ಕೂಡ ಮುಂದುವರೆಸಲಿಲ್ಲ ಆದರೆ ನಮ್ಮ ರಾಜ್ಯದಲ್ಲಿ ನಾವು ದೊಡ್ಡಹಂತದಲ್ಲಿ ಈ ಕಾರ್ಯಕ್ರವನ್ನು ಹಾಕಿಕೊಂಡು ಮುಂದುವರೆಸುತ್ತಿರುವುದರ ಬಗ್ಗೆ ನಾವೆಲ್ಲರೂ ಹೆಮ್ಮೆ ಪಡಬೇಕಾಗಿದೆ. ಇದಕ್ಕೆ ಎಲ್ಲಾ ಸದಸ್ಯರುಗಳು ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ಉಪಾಧ್ಯಕ್ಷಿಣಿಯವರೆ ಇನ್ನೊಂದು ವಿಷಯವೇನೆಂದರೆ, ಅಕ್ಷಯ ಯೋಜನೆಯನ್ನು ತಂದಾಗ ಇದು ಒಂದು ರೀತಿ ಸರಳವಾಗಿದೆ ಎಂದು ಟೀಕೆ ಮಾಡಲು ಪ್ರಾರಂಭ ಮಾಡಿದರು. ನಮ್ಮ ಶಾಲೆಗಳಲ್ಲಿ ಶಿಕ್ಷಕರೆ ಇಲ್ಲದದ್ದಾಗ ಈ ಸರ್ಕಾರ ಅಕ್ಷಯ ಯೋಜನೆಯನ್ನು ಪ್ರಾರಂಭ ಮಾಡುತ್ತಿದೆಯಲ್ಲಾ ಇದರ ಉದ್ದೇಶವೇನು ಎಂದು. ಇದನ್ನು ನಾವು ಯೋಜನೆ ಮಾಡಬೇಕು. ಎಷ್ಟೋ ಜನ ಹರಿಜನಗಿರಿಜನರ ಬಡವವ ಮಕ್ಕಳು ಶಾಲೆಗೆ ಬರುವುದಿಲ್ಲ, ಕಾರಣ ಬಡತನದ ಜೊತೆಗೆ 5 ವರ್ಷದ ಮಗು ಅಪ್ಪ ಅಮ್ಮನ ಜೊತೆ ಮರಳನ್ನು ಹೊರಲೋ

ಅಥವಾ ಕಾಫಿ ಹಣ್ಣನ್ನುಕೊಯ್ಯಲೋ ಹೋಗುತ್ತದೆ. ಅಮ್ಮ ಒಂದು ದಿನಕ್ಕೆ ಇಷ್ಟು ಬೂಸಲು ಅಥವಾ ಅಷ್ಟು ಕೆ.ಜಿ. ಕಾಫಿಯ ಹಣ್ಣನ್ನು ಕುಯ್ಯಬೇಕಾಗುತ್ತದೆ. ಒಂದು ದಿನಕ್ಕೆ ಎರಡು ಅಥವಾ ಮೂರ ಬೂಸಲು ಕಾಫಿ ಹಣ್ಣನ್ನು ಕುಯ್ದರೆ ಅಥವಾ ಇದಕ್ಕಿಂತ ಹೆಚ್ಚು ಕಾಫಿ ಹಣ್ಣನ್ನು ಕುಯ್ದರೆ ಹೆಚ್ಚು ಹಣ ಸಿಗುತ್ತದೆ.

ಅದಕ್ಕೆ ಅಮ್ಮಂದಿರು ಏನು ಮಾಡುತ್ತಾರೆಂದರೆ ಮಗುವಿಗೆ 5 ವರ್ಷವಾದರೆ ಆ ಮಗುವನ್ನು ಕಾಫಿ ಹಣ್ಣು ಕುಯ್ಯಲಿಕ್ಕೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಆ ಮಗುವಿಗೆ ಓದುವ ಬಗ್ಗೆ ಆಸಕ್ತಿಯೇ ಇರುವುದಿಲ್ಲ. ಅದು ಅಮ್ಮನ ಜೊತೆ ಕಾಫಿ ಹಣ್ಣು ಕುಯ್ಯುವುದರಿಂದ ಹಿಡಿದು ಮುಂದಿನ ಕೆಲಸ ಪ್ರಾರಂಭ ಮಾಡಿಕೊಳ್ಳುತ್ತದೆ. ಜೊತೆಗೆ ತಂದೆ ತಾಯಿಗಳು ಇದರಿಂದ ನಮಗೆ ಸ್ವಲ್ಪ ದುಡ್ಡು ಸಿಗುತ್ತದೆಂದು ಶಾಲೆಗೆ ಹೋಗುತ್ತಿದ್ದವರನ್ನು ಸಹ ಹಣ್ಣನ್ನು ಕುಯ್ಯುವ ಸಂದರ್ಭದಲ್ಲಿ ಶಾಲೆ ಬಿಡಿಸಿ ಹಣ್ಣು ಕುಯ್ಯಲಿಕ್ಕೆ ಕರೆದುಕೊಂಡು ಹೋಗುತ್ತಾರೆ. ಎಷ್ಟೋ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವ ಪ್ರಸಂಗವಿದೆ. ಈಗ ನಾವು ಅಕ್ಷಯ ಯೋಜನೆ ಇಂಟ್ರಡ್ಯೂಸ್ ಮಾಡಿದ ಮೇಲೆ ಮಕ್ಕಳನ್ನು ಶಾಲೆಗೆ ಕಳುಹಿಸಲು ತಂದೆ ತಾಯಿಗಳಿಗೆ ಒಂದು ರೀತಿಯ ಆಸಕ್ತಿ ಬಂದಿದೆ. ಮಗುವಿಗೂ ಆಸಕ್ತಿ ಬರುತ್ತದೆ,ನಾನು ಪ್ರತಿದಿನ ಶಾಲೆಗೆ ಹೋದರೆ ನನ್ನ ಭಾಗದ ಒಂದು ರೂಪಾಯಿ ಬರುತ್ತದೆ, ಒಂದು ದಿನವೂ ಶಾಲೆಗೆ ಹೋಗುವುದನ್ನು ತಪ್ಪಿಸಿಕೊಳ್ಳಬಾರದು ಶಾಲೆಗೆ ಕಡ್ಡಾಯವಾಗಿ ಹೋಗಬೇಕು ಎನ್ನುವ ಮನಸ್ಸು ಬರುತ್ತದೆ. ಹೆಚ್ಚು ಮಕ್ಕಳು ಈಗ ಶಾಲೆಗೆ ತಪ್ಪಿಸಿಕೊಳ್ಳದೇ ಬರುತ್ತಿರುವುದನ್ನು ನಾವು ಕಂಡಿದ್ದೇವೆ. ನಿಜವಾಗಲೂ ನಾನು ಕೆಲವು ಶಾಲೆಗಳ ವಾರ್ಷಿಕೋತ್ಸವಕ್ಕೆ ಹೋದಾಗ' ನಾನು ಶಾಲಾ ಶಿಕ್ಷಕರನ್ನು ಅಕ್ಷಯ ಯೋಜನೆ ಕಾರ್ಯಕ್ರಮ ಬಂದ ಮೇಲೆ ಏನಾದರೂ ಮಕ್ಕಳ ಅಟೆಂಡೆನ್ಸ್ ಇನ್‌ಕ್ರೀಸ್ ಆಗಿದೆಯೇ ಎಂದು ಕೇಳಿದೆ. ಅದಕ್ಕೆ ಅವರು ಇನ್‌ಕ್ರೀಸ್ ಆಗಿದೆಯೆಂದು ಒಪ್ಪಿಕೊಂಡರು. ಆದ್ದರಿಂದ ಈ ಕಾರ್ಯಕ್ರಮವನ್ನು ವಿರೋಧ ಮಾಡುವುದಾಗಲಿ ಅಥವಾ ಸರಳವಾಗಿ ಮಾತನಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಸಿ. ಬೈರೇಗೌಡ: ಈ ಅಕ್ಷಯ ಯೋಜನೆಯಲ್ಲಿ ತಮ್ಮ ತಾಲ್ಲೂಕಿನಲ್ಲಿ ತಮ್ಮ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ. ಎಷ್ಟು ಜನ ತಂದೆತಾಯಂದಿರ ಕೈಗೆ ಈ ಹಣ ಸೇರಿದೆ, ದಯವಿಟ್ಟು ತಮ್ಮಲ್ಲಿ ಏನಾದರೂ ಅಂಕಿ ಅಂಶವಿದ್ದರೆ ಸ್ವಲ್ಪ ತಿಳಿಸಿ, ರಾಜ್ಯದಲ್ಲಿ ಹೇಳುವುದು ಬೇಡ ತಮ್ಮ ಕ್ಷೇತ್ರದ್ದು ಮಾತ್ರ ಹೇಳಿ.

ಶ್ರೀಮತಿ ಮೋಟಮ್ಮ: ಉಪಾಧ್ಯಕ್ಷಿಣಿಯವರೇ ಈಗ ಈ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ವಿದ್ಯಾಮಂತ್ರಿಯಂತೂ ಖಂಡಿತ ನಾನಲ್ಲ, ನನಗೆ ಗೊತ್ತಿರುವ ಹಾಗೆ, ಇವರಿಗೆ ಗೊತ್ತಿರುವ ಹಾಗೆ ಅಕ್ಷಯ ಯೋಜನೆ ಕಾರ್ಯಕ್ರಮ ನಿಧಾನವಾಯಿತು. ಕಾರಣ ಇಷ್ಟೇ ಮೊದಲು ನಾವು ಶಾಲೆಯಲ್ಲಿ ಊಟ ಕೊಡಬೇಕೆಂದು ಇತ್ತು.

ಶ್ರೀ ಸಿ. ಬೈರೇಗೌಡ: ವಿದ್ಯಾಮಂತ್ರಿಯಲ್ಲ ಉತ್ತರ ಹೇಳುವ ಶಕ್ತಿ ಇದ್ದ ಅದನ್ನು ಹೇಳಿ. ನನ್ನ ಕ್ಷೇತ್ರದಲ್ಲಿ ಸ್ವಲ್ಪವೂ ದುಡ್ಡು ಕೊಟ್ಟಿಲ್ಲ, ನಾನು ವಿರೋಧಪಕ್ಷದವನೆಂದು ತಿಳಿದುಕೊಂಡು ನಮ್ಮ ಕ್ಷೇತ್ರದಲ್ಲಿ ಕೊಡದೇ ಇರಬಹುದೆಂದು ನಾನು ಭಾವಿಸಿದ್ದೆ. ಅವರ ಕ್ಷೇತ್ರದಲ್ಲಿ ಕೊಟ್ಟಿದ್ದರೆ ನಮಗೆ ಸಂತೋಷ. ಏಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕಾಗಿರತಕ್ಕಂಥದ್ದು ಯಾವುದೇ ಸರ್ಕಾರದ ಪ್ರಥಮ ಕರ್ತವ್ಯ. ಯಾರೇ ಅದನ್ನು ಲೋಪ ಮಾಡಿದರೂ ಕೂಡ ನಾನು ಖಂಡನೆ ಮಾಡುತ್ತೇನೆ. ಯಾರೇ ಮಾಡಿರಲಿ ಸರ್ಕಾರ ಮಾಡಿರಲಿ ಇನ್ನೊಂದು

ಸರ್ಕಾರ ಮಾಡಿರಲಿ ಅದನ್ನು ನಾನು ಖಂಡಿಸುತ್ತೇನೆ. ಆದರೆ ಈ ಸರ್ಕಾರದವರೂ ಕೂಡ ಇಂದು ಈ ಕಾರ್ಯಕ್ರಮ ಜಾರಿಗೆ ಕೊಟ್ಟಿದ್ದು, ಆ ಕಾರ್ಯಕ್ರಮ ಸರಿಯಾದಂತಹ ರೀತಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಜಾರಿಗೆ ಆದರೆ ಸಂತೋಷಪಡತಕ್ಕಂಥವರಲ್ಲಿ ಪ್ರಥಮ ನಾನು. ಆದರೆ ಇಲ್ಲಿಯವರೆಗೂ ಕೂಡ ಈ ಕೆಲಸ ಆಗಿಲ್ಲವೆಂದು ಇದೆ. ನನ್ನ ಕ್ಷೇತ್ರದಲ್ಲಂತೂ ಜಾರಿ ಆಗಿಲ್ಲ. ಅವರ ಕ್ಷೇತ್ರದಲ್ಲಿ ಆಗಿದ್ದರೆ ಬಹಳ ಸಂತೋಷ. ಅವರು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವರು ಬಹಳ ಸಂತೋಷ. ಹಾಗೆ ಇದ್ದರೆ ದಯವಿಟ್ಟು ಹೇಳಿ.

ಶ್ರೀಮತಿ ಮೋಟಮ್ಮ: ಉಪಾಧ್ಯಕ್ಷಿಣಿಯವರೇ, ನನ್ನ ಕ್ಷೇತ್ರದಲ್ಲಿ ಈ ಯೋಜನೆ ಜಾರಿಯಾಗಿದೆಯೇ ಎಂದು ಕೇಳಿದ್ದರೆ ನಾನು ಹೇಳುತ್ತಿದ್ದೆ, ಅವರು ಎಷ್ಟು ಅಮೌಂಟ್ ಬಿಡುಗಡೆಯಾಗಿದೆ, ಎಷ್ಟು ಮಕ್ಕಳಿಗೆ ಈ ಹಣ ತಲುಪಿದೆಯೆಂದು ಒಂದು ಫಿಗರ್ ಕೊಡಿ ಎಂದು ಕೇಳಿದರೆ ಡೀಟೈಲ್ಸ್ ನನ್ನ ಹತ್ತಿರ ಇಲ್ಲ. ಆದ್ದರಿಂದ ನಾನು ಅದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ನನ್ನ ಕ್ಷೇತ್ರದಲ್ಲಿ ಇದು ಜಾರಿಯಲ್ಲಿದೆ.

ಶ್ರೀ ಪಿ. ಬೈರೇಗೌಡ: ಉಪಾಧ್ಯಕ್ಷಿಣಿಯವರೇ, ಒಟ್ಟಿನಲ್ಲಿ ಅವರ ಕ್ಷೇತ್ರದಲ್ಲಿ ಇದರ ಹಣ ಬಟವಾಡೆಯಾಗಿದೆ ಎಂದು ಅಷ್ಟು ಹೇಳಿದರೆ ಸಾಕು.

ಶ್ರೀಮತಿ ಮೋಟಮ್ಮ: ನನ್ನ ಕ್ಷೇತ್ರದಲ್ಲಿ ಆಗಿದೆ, ಏಕೆಂದರೆ ಎಲ್ಲಾ ಬ್ಯಾಂಕ್‌ಗಳಲ್ಲಿ ಅಕೌಂಟ್ ಓಪನ್ ಮಾಡುವುದು ಸ್ವಲ್ಪ ಡಿಲೇ ಆಯಿತು. ಬ್ಯಾಂಕಿನವರು ಪ್ರತಿಯೊಬ್ಬರ ಹೆಸರಿನಲ್ಲಿ ನಾನು ಅಕೌಂಟ್ ತೆಗೆಯಲಿಕ್ಕೆ ಆಗುವುದಿಲ್ಲವೆಂದು ರೆಫ್ಯೂಸ್ ಮಾಡಿದರು. ಸರ್ಕಾರದಿಂದ ನಿರ್ದಿಷ್ಟವಾದ ಆದೇಶ ಬಂದಮೇಲೆ ಪ್ರತಿ ಬ್ಯಾಂಕ್‌ನಲ್ಲೂ ಅಕೌಂಟ್ ಓಪನ್ ಮಾಡುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ: 18 ಕೋಟಿ ರೂಪಾಯಿ ಬಿಡುಗಡೆಯಾಗಿದೆ, ಇನ್ನು ಮಕ್ಕಳ ಕೈಗೆ ಸೇರಿಲ್ಲವೆಂದು ಅವರಿಗೆ ಉತ್ತರ ಹೇಳಿ.

ಶ್ರೀ ವಾಟಾಳ್ ನಾಗರಾಜ್: ನೀವು ಏಕೆ ಇತ್ತೀಚೆಗೆ ಸುಳ್ಳು ಹೇಳುವುದನ್ನು ಕಲಿಯುತ್ತಿದ್ದೀರಿ.

ಶ್ರೀಮತಿ ಮೋಟಮ್ಮ: ನಿಮ್ಮಷ್ಟು ಸುಳ್ಳನ್ನು ನಾನು ಹೇಳುವುದಿಲ್ಲ, ಸತ್ಯವನ್ನೇ ಹೇಳುತ್ತಿದ್ದೇವೆ, ಸತ್ಯವನ್ನಲ್ಲದೆ ಬೇರೆನನ್ನು ಮಾತನಾಡುತ್ತಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಉಪಾಧ್ಯಕ್ಷಿಣಿಯವರೇ ಈ ಅಕ್ಷಯ ಯೋಜನೆ ಸ್ವಲ್ಪ ತಡವಾಗಿರಬಹುದು. ಆದರೆ ಮುಂದಿನ ಸಾರಿಯಾದರೂ ಅಂದರೆ 1992ರಲ್ಲಿ ಅದು ಕಂಟಿನ್ಯೂ ಆಗುತ್ತದೆ. ಈ ಬಡ ಜನರ ಮಕ್ಕಳಿಗೆ ಈ ಯೋಜನೆ ಸಹಾಯಕವಾಗುತ್ತದೆ. ನೀವು ಹಿಂದೆ ಮಕ್ಕಳಿಗೆ ಪುಸ್ತಕ, ಸಮವಸ್ತ್ರ ಕೊಟ್ಟಿದ್ದೀರಲ್ಲಾ ಅದಕ್ಕಿಂತ ಬಹಳ ಉತ್ತಮವಾದ ಒಂದು ಕಾರ್ಯಕ್ರಮ ನಾನಂತೂ ಇದನ್ನು ಅಪ್ರಿಷಿಯೇಟ್ ಮಾಡುತ್ತೇನೆ.

ಇದೇ ರೀತಿ ಕಾರ್ಯಕ್ರಮವನ್ನು ತೆಗೆದುಕೊಂಡರೆ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಗುಡಿ ಕೈಗಾರಿಕೆಗಳು ಮೂಲೆಗುಂಪಾಗಿದ್ದುವು. ಅಲ್ಲಿ ಜನರಿಗೆ ಕೈಗೆ ಕೆಲಸವೇ ಇರಲಿಲ್ಲ. ಈ ವಿಶ್ವಕಾರ್ಯವನ್ನು ಪ್ರಾರಂಭ ಮಾಡಿದ್ದನ್ನು ನಮ್ಮ ಪ್ರಧಾನ ಮಂತ್ರಿಗಳು ಮೆಚ್ಚಿ ಶ್ಲಾಘನೆ ಮಾಡಿ ಇಂಥ ಒಂದು ಯೋಜನೆಯನ್ನು ಈ ರಾಜ್ಯದಲ್ಲಿ ಪ್ರಾರಂಭ ಮಾಡುತ್ತಿರುವುದು ನನಗೆ ಹೆಮ್ಮೆ ಎಂದು ಹೇಳಿ ಹೋಗಿದ್ದಾರೆ. ಶಾಸಕ ಮಿತ್ರರಾದ ತಾವು ಇದನ್ನು ಹಗುರವಾಗಿ ತಿಳಿದುಕೊಳ್ಳುವುದರಲ್ಲಿ ಅರ್ಥವಿಲ್ಲ. ಕಳೆದ 13ನೇ ತಾರೀಖು 'ವಿಶ್ವ' ಪ್ರಾಡಕ್ಟ್‌ನ ಉದ್ಘಾಟನೆ ಆಯಿತು. ವಿಶ್ವ ಘಟಕದಿಂದಲೂ ಉತ್ಪಾದನೆ ಮಾಡಿದಂಥ ಪ್ರತಿಯೊಂದು ವಸ್ತುಗಳು ಪ್ರದರ್ಶನವನ್ನು ಬ್ಯಾಂಕ್ವೆಟ್

ಹಾಲ್‌ನಲ್ಲಿ ಮಾಡಿದ್ದರು. ನಾವೆಲ್ಲರೂ ಹೋಗಿ ನೋಡಿಕೊಂಡು ಬಂದಿದ್ದೇವೆ. ಬಸವ ಭವನದಲ್ಲಿ ಎಕ್ಸಿಬಿಷನ್ ಕಂ ಸೇಲ್ ಎಂದು ಏರ್ಪಾಡು ಮಾಡಿದ್ದರು. ಅದನ್ನು ನೋಡಲು ತಾವು ಯಾರೂ ಕೂಡ ಅಲ್ಲಿಗೆ ಹೋಗಿರಲಿಲ್ಲ ಎನಿಸುತ್ತದೆ. ಅದನ್ನು ತಾವು ನೋಡಿದಿದ್ದರೆ ನಮ್ಮ ಹಳ್ಳಿಗಾಡಿನ ಜನರು ಈ ವಿಶ್ವ ಕಾರ್ಯಕ್ರಮದಲ್ಲಿ ಎಷ್ಟು ನಿಪುಣರಿದ್ದಾರೆ, ಈ ಕಾರ್ಯಕ್ರಮದಿಂದ ಅವರಿಗೆ ಎಷ್ಟು ಕೆಲಸ ಸಿಕ್ಕಿದೆ ಮತ್ತು ಅವರ ನಿಪುಣತೆಗೆ ಎಷ್ಟು ಅವಕಾಶ ಸಿಕ್ಕಿದೆ ಎಂಬುದನ್ನು ನೀವು ತಿಳಿದುಕೊಳ್ಳುತ್ತಿದ್ದೀರಿ, ಮತ್ತು ಮೆಚ್ಚುಗೆಯನ್ನು ವ್ಯಕ್ತಮಾಡುತ್ತಿದ್ದೀರಿ. ಇದರಿಂದ ಬಹಳಷ್ಟು ಜನ ಹಳ್ಳಿಗಾಡಿನವರಿಗೆ ಕೈಗೆ ಕೆಲಸ ಸಿಕ್ಕಿ ಆರ್ಥಿಕವಾಗಿ ಸ್ವಾವಲಂಬನೆ ಪಡೆದುಕೊಳ್ಳುವುದಕ್ಕೆ ಈ ವಿಶ್ವ ಕಾರ್ಯಕ್ರಮ ಹೆಚ್ಚು ಸಹಕಾರಿಯಾಗಿದೆ ಎಂದು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ, ಕಳೆದ 30ವರ್ಷಗಳಿಂದಲೂ ಯಾವತ್ತೂ ಆಗದೇ ಇದ್ದಷ್ಟು ಮಳೆ ನಮ್ಮ ರಾಜ್ಯದಲ್ಲಿ ಬಿತ್ತು. ಇದರಿಂದಾಗಿ ಸಾಕಷ್ಟು ನಷ್ಟವೂ ಕೂಡ ಉಂಟಾಯಿತು. ಆಗ ನಮ್ಮ ಸರ್ಕಾರದವರು ಎದೆಗುಂದದೆ ಸಾಕಷ್ಟು ಪರಿಹಾರವನ್ನು ಒದಗಿಸಿ ಮನೆಯನ್ನು ಕಳೆದುಕೊಂಡವರಿಗೆ ಮನೆಯನ್ನು ಕಟ್ಟಿಸಿಕೊಳ್ಳುವುದಕ್ಕೆ, ರಸ್ತೆಗಳ ರಿಪೇರಿಗೆ ಇನ್ನೂ ಹಲವಾರು ಕಾಮಗಾರಿಗಳನ್ನು ಮಾಡಿಸಲು ಫ್ಲಡ್ ರಿಲೀಫ್ ವರ್ಕ್ಸ್‌ನ್ನು ತೆಗೆದುಕೊಳ್ಳುವುದಕ್ಕಾಗಿ ಸುಮಾರು 25-30 ಕೋಟಿ ರೂಪಾಯಿಗಳನ್ನು ಇಡೀ ರಾಜ್ಯಕ್ಕೆ ಬಿಡುಗಡೆಮಾಡಿತು. ಅದರಲ್ಲೂ ಕೋಲಾರ ಮತ್ತು ಬೆಂಗಳೂರಿನಲ್ಲಿ ಆದ್ಧಂಥ ಅನಾಹುತ ಬಹಳ ದೊಡ್ಡದು. ನಮ್ಮ ಮಲೆನಾಡಿನಲ್ಲಿ ಆದಂಥ ಅನಾಹುತಕ್ಕಿಂತಲೂ ಇಲ್ಲಿ ಹೆಚ್ಚಾಗಿ ಆದುದುರಿಂದ ಇಲ್ಲಿಗೆ ಹೆಚ್ಚಿನ ಪರಿಹಾರವನ್ನು ನಮ್ಮ ಸರ್ಕಾರ ಒದಗಿಸಿರುವುದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗುತ್ತದೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ ಕಾವೇರಿ ಜಲ ವಿವಾದ. ಈ ಕಾವೇರಿ ಜಲವಿವಾದ ನಮ್ಮ ರಾಜ್ಯದಲ್ಲಿ ಸ್ವಲ್ಪ ಮಟ್ಟಿಗೆ ದುರದೃಷ್ಟಕರ ಘಟನೆಗಳು ನಡೆದವು. ಆದರೂ ನಮ್ಮ ಸರ್ಕಾರ ಎದೆಗುಂದಲಿಲ್ಲ. ಅದನ್ನೆಲ್ಲಾ ಧೈರ್ಯವಾಗಿ ಹತ್ತಿಕ್ಕಿ ಹಿಂಸಾಮಾರ್ಗವನ್ನು ಅನುಸರಿಸುವುದು ಸರಿಯಲ್ಲ, ಶಾಂತಿ, ಸಂಧಾನದ ರೀತಿಯಲ್ಲಿ ರಾಜೀ ಸೂತ್ರ ಅನುಸರಿಸಿ ಪರಿಹಾರವನ್ನು ಕಂಡುಕೊಳ್ಳಬೇಕೆಂಬ ದೃಷ್ಟಿಯಿಂದ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಮಾಡಿ ಅವರಿಂದ ನಮಗೆ ಸರಿಯಾದ ನ್ಯಾಯ ಸಿಗಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಇದರಲ್ಲಿ ವಿರೋಧ ಪಕ್ಷದ ಎಲ್ಲಾ ನಾಯಕರೂ ಕೂಡ ಸರ್ಕಾರಕ್ಕೆ ಸಹಕಾರವನ್ನು ನೀಡಿದ್ದಾರೆ. ಇವತ್ತು ಮಾನ್ಯ ಪ್ರಧಾನ ಮಂತ್ರಿಗಳಿಂದ ಉತ್ತಮ ತೀರ್ಪು ಅಥವಾ ನ್ಯಾಯವನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಇದರ ಬಗ್ಗೆ ಕೂಡ ನಾವು ಮಾನ್ಯ ಮುಖ್ಯ ಮಂತ್ರಿಗಳನ್ನು ಈ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ.

ಇನ್ನು ನಾವು ಈ ರಾಜ್ಯದ ಅಧಿಕಾರವನ್ನು ವಹಿಸಿಕೊಂಡಾಗ ಆರ್ಥಿಕ ಪರಿಸ್ಥಿತಿ ಹೇಳಿತ್ತು ಎಂಬುದು ಎದುರಿಗೆ ಕುಳಿತಿರತಕ್ಕ ತಮಗೆಲ್ಲಾ ಗೊತ್ತು. ಆವತ್ತಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ ನಮ್ಮ ರಾಜ್ಯದಲ್ಲಿರತಕ್ಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನಮ್ಮ ಯೋಜನೆಗಳಲ್ಲಿ ಸಾಕಷ್ಟು ಹಣವನ್ನು ಕೈಗಾರಿಕೆ, ಶಿಕ್ಷಣ, ಆರೋಗ್ಯ, ವಿದ್ಯುಚ್ಛಕ್ತಿ ಉತ್ಪಾದನೆ ಇನ್ನೂ ಮುಂತಾದವಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅವುಗಳನ್ನು ನಡೆಸಿಕೊಂಡು ಬಂದಿದ್ದೇವೆ. ತಮಗೆ ಇದು ತಿಳಿದಿರಬಹುದು. ಕೇಂದ್ರ ಯೋಜನಾ ಆಯೋಗದವರೂ ಕೂಡ ಈ ಯೋಜನಾ ಆಯೋಗದವರೂ ಕೂಡಾ ಈ ಆಯೋಜನಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವ ಬಗ್ಗೆ ನಮ್ಮ

ಕರ್ನಾಟಕ ಸರ್ಕಾರವನ್ನು ಅಪ್ರಿಷಿಯೇಟ್ ಮಾಡಿದ್ದಾರೆ. ಆದುದರಿಂದ ತಾವೂ ಕೂಡ ನಮ್ಮ ಸರ್ಕಾರವನ್ನು ಅಭಿನಂದಿಸಬೇಕೆಂದು ಮಾನ್ಯ ವಿರೋಧಪಕ್ಷದ ಎಲ್ಲಾ ಸದಸ್ಯರನ್ನೂ ಕೇಳಿಕೊಳ್ಳುತ್ತೇನೆ. ಕೇಂದ್ರ ಸರ್ಕಾರ ನಮ್ಮನ್ನು ಪ್ರಶಂಸೆ ಮಾಡಿದೆ.

ಶ್ರೀ ವಾಟಾಳ್ ನಾಗರಾಜ್:. ಯಾವ ಆಯೋಗ?

ಶ್ರೀಮತಿ ಮೋಟಮ್ಮ: ಯಾವ ಆಯೋಗ ಎಂದರೆ ಇನ್ನು ಯಾವ ಆಯೋಗ? ಹೊಸದಾಗಿ ನಾವು ಯಾವ ಆಯೋಗವನ್ನು ಪ್ರಾರಂಭ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಏನಾದರೂ ಹೇಳಿ ಅದಕ್ಕೆ ನಾನು ಪೂರ್ಣ ಬೆಂಬಲವನ್ನು ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ದೆಹಲಿಯಲ್ಲಿ ಇರತಕ್ಕವರು ಪ್ರಶಂಸೆ ಮಾಡತಕ್ಕದ್ದಲ್ಲ. ನಮ್ಮ ಜಿಲ್ಲೆಗೆ ತಾವು ಒಂದು ಸಾರಿ ಪ್ರವಾಸ ಬಂದಿರಿ. ಆಗ ಜನರು ಏನು ಹೇಳಿದರೆಂಬುದನ್ನು ತಾವು ದಯವಿಟ್ಟು ನೆನಪಿನಲ್ಲಿಟ್ಟುಕೊಂಡು ಮಾತನಾಡಿ.

4.45 ಪಿ.ಎಂ.

ಶ್ರೀಮತಿ ಮೋಟಮ್ಮ : ಜನ ನಮ್ಮ ಹತ್ತಿರ ಸಧ್ಯಕ್ಕೆ ಏನು ಹೇಳಲಿಲ್ಲ. ನನಗನಿಸುತ್ತದೆ ಮಾನ್ಯ ಬೈರೇಗೌಡರ ಹೇಳಿಕೆಯನ್ನು ಬಿಟ್ಟರೆ ಬೇರೆ ಜನರು ಯಾರೂ ಏನನ್ನು ಹೇಳಲಿಲ್ಲ. ಇದರ ಜೊತೆಗೆ ಕೃಷಿ ಕ್ಷೇತ್ರದಲ್ಲಿಯೂ ಸಹ ನಾವು ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದೇವೆ. ಜೊತೆಗೆ ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕೆನ್ನುವ ದೃಷ್ಟಿಯಿಂದ ತಮಗೆಲ್ಲ ಗೊತ್ತಿರುವಹಾಗೆ ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಕಾಲೇಜ್ ಒಂದನ್ನು ಸರ್ಕಾರ ಪ್ರಾರಂಭಮಾಡಲಿಕ್ಕೆ ಮುಂದೆ ಬಂದಿದೆ. ಹಾಗೆಯೂ ಕೊಡಗು ಜಿಲ್ಲೆಯಲ್ಲಿ ಫಾರೆಸ್ಟ್ ಕಾಲೇಜನ್ನು ಪ್ರಾರಂಭ ಮಾಡಲಿಕ್ಕೆ ಮುಂದೆ ಬಂದಿದೆ. ಇದು ನಿಜವಾಗಿಯೂ ನಾವೆಲ್ಲರೂ ಮೆಚ್ಚತಕ್ಕಂಥ ಸಂಗತಿಯಾಗಿದೆ. ಈ ದೃಷ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಬಹಳ ಅಭಿನಂದಿಸಬೇಕಾಗಿದೆ. ಯಾವುದೇ ರೀತಿಯ ಕಾಲೇಜನ್ನು ಬೇರೆ ಯಾವುದಾದರೂ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದರೆ ಆ ರಾಜ್ಯದ ರಾಜಧಾನಿಯಲ್ಲಿಯೋ ಅಥವಾ ಜಿಲ್ಲಾ ಕೇಂದ್ರದಲ್ಲಿಯೋ ಪ್ರಾರಂಭ ಮಾಡಿರುತ್ತಾರೆ. ಆದರೆ ಗ್ರಾಮಾಂತರ ಜಿಲ್ಲೆಯಾದ ಕೋಲಾರದಲ್ಲಿ ರೇಷ್ಮೆ ಕಾಲೇಜನ್ನು, ಫಾರೆಸ್ಟ್ ಕಾಲೇಜನ್ನು ಕೊಡಗು ಜಿಲ್ಲೆಯಲ್ಲಿ, ಆರ್ಟಿಕಲ್ಚರ್ ಕಾಲೇಜನ್ನು ಮೂಡಿಗೆರೆಯಲ್ಲಿ, ಕೃಷಿಕಾಲೇಜನ್ನು ಮಂಡ್ಯದಲ್ಲಿ ಪ್ರಾರಂಭ ಮಾಡಿರುವುದು ಇದು ಒಂದು ರೀತಿಯ ಹೊಸ ಮಾದರಿ ಮತ್ತು ಹೊಸ ಹೆಜ್ಜೆ ಎಂದು ಹೇಳಿದರೆ ತಪ್ಪಾಗಲಾರದು. ಈ ದೃಷ್ಟಿಯಲ್ಲಿ ನಾವು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ರೇಷ್ಮೆ ಕಾಲೇಜನ್ನು ಪ್ರಾರಂಭ ಮಾಡುವುದರಿಂದ ಮಾನ್ಯ ಬೈರೆಗೌಡರಿಗೆ ತುಂಬಾ ಉಪಯೋಗವಾಗುತ್ತದೆ. ವಿದೇಶಿ ಮಾರ್ಕೆಟ್‌ನಲ್ಲಿ ನಮ್ಮ ರೇಷ್ಮೆಗೆ ಹೆಚ್ಚಿನ ಬೆಲೆ ಇದೆ.

ಕೈಗಾರಿಕೆಗಳ ಕಡೆಗೆ ನಾವು ಗಮನಹರಿಸುತ್ತಿರುವ ಸಂದರ್ಭದಲ್ಲಿ ನಾವು ಈ ರೇಷ್ಮೆ ಉದ್ಯಮದಲ್ಲಿ ಮುಂದೆ ಬಂದು ಇನ್ನು ಹೆಚ್ಚು ಲೇಟಸ್ಟ್ ಟೆಕ್ನಾಲಜಿಯನ್ನು ಬಳಸಿಕೊಂಡು ಇಂಥ ಒಂದು ಕಾಲೇಜು ಪ್ರಾರಂಭಮಾಡುವುದರಿಂದ ನಾವು ರೇಷ್ಮೆ ಉದ್ಯಮದಲ್ಲಿ ಹೆಚ್ಚು ಉತ್ಪಾದನೆ ಮಾಡಿ ಹೆಚ್ಚು ವಿದೇಶಿವಿನಿಮಯವನ್ನು ಗಳಿಸಲಿಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಕಾಲೇಜನ್ನು ಪ್ರಾರಂಭಮಾಡಿರುವುದು ನಿಜಕ್ಕೂ ಒಂದು ಉತ್ತಮ ವಾದ ಸಾಧನೆಯಾಗಿದೆ ಎಂದು ಹೇಳಬೇಕಾಗುತ್ತದೆ. ಹಾಗೆಯೇ ಫಾರೆಸ್ಟ್ ಕಾಲೇಜ್ ಮಾಡಿರುವುದು ಒಂದು ಒಳ್ಳೆಯ ಕೆಲಸವಾಗಿದೆ. ನಮ್ಮ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅದರಲ್ಲೂ ಮೂಡಿಗೆರೆಗೆ ಫಾರೆಸ್ಟ್ ಕಾಲೇಜ್ ಬೇಕೆಂದು ಕೇಳಿದ್ದೆವು. ಅದು ಕೊಡಗು ಜಿಲ್ಲೆಗೆ ಹೋಗಿದೆ. ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡುವುದಕ್ಕೆ ಫಾರೆಸ್ಟ್ ಇಲಾಖೆ ಮುಖ್ಯವಾಗಿದೆ. ಇಂಥ ಒಂದು ಸಂದರ್ಭದಲ್ಲಿ ಈ ಫಾರೆಸ್ಟ್ ಕಾಲೇಜನ್ನು ಪ್ರಾರಂಭ ಮಾಡಿ ಅದರಲ್ಲಿ ಸಾಕಷ್ಟು ರಿಸರ್ಚ್ ಮಾಡಿ ಸಾಕಷ್ಟು ಡೆವಲಪ್‌ಮೆಂಟ್ ಮಾಡಲಿಕ್ಕೆ ಸಾಧ್ಯವಾದಂಥ ಒಂದು ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿರುವುದು ಬಹಳ ಮೆಚ್ಚುವಂಥ ವಿಷಯ. ಹಾಗೆಯೇ ಕೃಷ್ಣ ನದಿ ನೀರನ್ನು ಸರಿಯಾದ ರೀತಿಯಲ್ಲಿ ಹಂಚಿಕೊಳ್ಳುವ ದೃಷ್ಟಿಯಲ್ಲಿ ಅದಕ್ಕೆ ವಿಶ್ವಬ್ಯಾಂಕ್ ನೆರವಿನಿಂದ ಈಗಾಗಲೇ ಸಾಕಷ್ಟು ಯೋಜನೆಗಳನ್ನು ಪ್ರಾರಂಭ ಮಾಡಿದ್ದಾರೆ. ಅದನ್ನು ಟೈಮ್‌ಬಾಂಡ್ ಪ್ರೋಗ್ರಾಮ್ ಯೋಜನೆ ಮಾಡಿಕೊಂಡು ಸಾಕಷ್ಟು ಹಣವನ್ನು ಅಳವಡಿಸಿಕೊಂಡು ಈ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾವೇರಿ ನೀರಿನಲ್ಲಿ ನಮಗೆ ಏನು ಅನ್ಯಾಯವಾಗಿದೆ, ಆ ರೀತಿ ಅನ್ಯಾಯ ಕೃಷ್ಣಾ ನದಿ ನೀರಿನಲ್ಲಿ ನಮಗೆ ಆಗಲಾರದಂತೆ ನೋಡಿಕೊಳ್ಳಬೇಕು ಹಾಗೆಯೇ ಅದಕ್ಕೆ ಒಂದು ಕೃಷ್ಣಾ ಕಣಿವೆ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ಸ್ಥಾಪಿಸಲು ಮುಂದೆ ಬಂದಿರುವುದಕ್ಕೆ ನಾವೆಲ್ಲರೂ ಅಪ್ರಿಶಿಯೇಟ್ ಮಾಡಬೇಕಾಗಿದೆ. ವಿದ್ಯುಚ್ಛಕ್ತಿ ಉತ್ಪಾದನೆಯಲ್ಲೂ ಸಹ ಸ್ವಾವಲಂಬನೆ ಪಡೆಯಬೇಕಾಗುತ್ತದೆನ್ನುವ ದೃಷ್ಟಿಯಿಂದ ಕಿರು ಜಲ ವಿದ್ಯುತ್ ಯೋಜನೆಯ ಬಗ್ಗೆ ಗಮನಹರಿಸುವುದರ ಜೊತೆಗೆ ಖಾಸಗೀಯವರು ವಿದ್ಯುತ್ ಉತ್ಪಾದನೆಯಲ್ಲಿ ಪಾಲುಗೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಒಂದು ಉತ್ತಮವಾದ ಬದಲಾವಣೆ ಎಂದು ಹೇಳಿದರೆ ತಪ್ಪಾಗಲಾರದು. ನಾವು ದಿನೇದಿನೇ ವಿದ್ಯುತ್ ಕೊರತೆ ಮತ್ತು ಲೋ ವೋಲ್ಟೇಜ್ ಪ್ರಾಬ್ಲಮ್‌ನ್ನು ಎದುರಿಸುತ್ತಿರಬೇಕಾದರೆ ಸಾಕಷ್ಟು ವಿದ್ಯುತ್ ಉತ್ಪಾದನೆಯನ್ನು ಮಾಡಲು ನಾವು ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಕ್ರಿಸ್ತಶಕ ಎರಡುಸಾವಿರ ವರ್ಷದ ಒಳಗಡೆ ತಾಂತ್ರಿಕ ಜ್ಞಾನದೊಂದಿಗೆ ಸಾಕಷ್ಟು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾಲಂಬನೆ ಪಡೆಯುವುದಕ್ಕೆ ಸರ್ಕಾರ ಇವತ್ತು ಸಾರ್ವಜನಿಕ ಮತ್ತು ಜಂಟಿ ವಲಯದಲ್ಲಿ ಯೋಜನೆಗಳನ್ನು ಕೈಗೊಳ್ಳಲು ಮುಂದಾಗಿರುವುದು ನಮಗೆಲ್ಲರಿಗೂ ತಿಳಿದ ವಿಷಯವಾಗಿದೆ. ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ದಿಟ್ಟತನವನ್ನು ಮೆಚ್ಚಬೇಕಾಗುತ್ತದೆ. ರಾಜ್ಯ ರಸ್ತೆಸಾರಿಗೆ ಬಗ್ಗೆಯೂ ಸಹ ಸರ್ಕಾರ ಒಂದು ರೀತಿಯ ಹೊಸ ನಿಲುವನ್ನು ತಳೆದಿರುವುದು ನಾವೆಲ್ಲರೂ ಒಪ್ಪತಕ್ಕಂಥ ವಿಷಯವಾಗಿದೆ. ಪ್ರತಿಸಾರಿ ಕೆ.ಎಸ್.ಆರ್.ಟಿ.ಸಿಯ ಬಗ್ಗೆ ಮೊಸಳೆ ಕಣ್ಣೀರನ್ನು ಸುರಿಸಿ ಮಾತನಾಡುತ್ತೇವೆ. ಮಾನ್ಯ ಸಿಂಧ್ಯರವರು ಈ ವಿಷಯದಲ್ಲಿ ಸಾಕಷ್ಟು ಅನುಭವವನ್ನು ಹೊಂದಿರುತ್ತಾರೆ.

ಆದರೂ ಇದುವರೆಗೆ ಸಾರಿಗೆ ಸಂಸ್ಥೆಯಲ್ಲಿರುವ ತೊಡಕುಗಳನ್ನು ಹೇಗೆ ನಿವಾರಣೆ ಮಾಡಬೇಕು, ಸಂಸ್ಥೆಯಲ್ಲಿ ಸೋರುವಿಕೆಯನ್ನು ಹೇಗೆ ಸರಿಪಡಿಸಬೇಕೆಂಬ ಬಗ್ಗೆ ತೀರ್ಮಾನಕ್ಕೆ ಬಂದಿಲ್ಲ, ಅದನ್ನು ತಡೆಗಟ್ಟುವುದಕ್ಕೆ ಆಗಿಲ್ಲ. ನಮ್ಮ ಸರ್ಕಾರ ಧೈರ್ಯ ತೆಗೆದುಕೊಂಡು ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣ ಮಾಡುವುದಕ್ಕೆ ಹೊರಟಿರುವುದು ಸ್ವಾಗತಾರ್ಹ. ನಮ್ಮ ಜಿಲ್ಲೆಯಲ್ಲೂ ಖಾಸಗೀ ಬಸ್ಸುಗಳಿಗೆ ರೂಟುಗಳನ್ನು ಬಿಟ್ಟುಕೊಟ್ಟಿದ್ದೇವೆ. ಮಂಗಳೂರಿನಲ್ಲಿ ಸಾರಿಗೆ ವ್ಯವಸ್ಥೆ ಚೆನ್ನಾಗಿದೆ. ಅಲ್ಲಿ ಹತ್ತು ನಿಮಿಷಕ್ಕೊಂದು ಬಸ್ಸು ಓಡುತ್ತದೆ. ಜನರಿಗೇನು ಅಲ್ಲಿ ಸಾರಿಗೆ ಸಮಸ್ಯೆಯೇ ಇಲ್ಲ. ನಾವು ಕೆಲವು ರೂಟುಗಳನ್ನು ಖಾಸಗೀಯವರಿಗೆ ಬಿಟ್ಟುಕೊಟ್ಟರೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಮತ್ತು ಖಾಸಗಿಯವರಿಗೆ ಕಾಂಪಿಟಿಷನ್ ಉಂಟಾಗಿ ಸಾರಿಗೆ ಸಂಸ್ಥೆಯಲ್ಲಿ ಏನು ತೊಡಕುಗಳಿವೆ ಅವು ನಿವಾರಣೆ ಆಗಬಹುದೆಂದು ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಜಲ್ದಿ ಕೆ.ಎಸ್.ಆರ್.ಟಿ.ಸಿ.ಯನ್ನು ಮುಚ್ಚಬಹುದು.

ಶ್ರೀಮತಿ ಮೋಟಮ್ಮ : ಸಮಸ್ಯೆಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸಾರಿಗೆ ಸಂಸ್ಥೆಯವರಿಗೂ ಖಾಸಗಿಯವರಿಗೂ ಕಾಂಪಿಟಿಷನ್ ಬಂದಾಗ ಸಾರಿಗೆ ಸಂಸ್ಥೆಯಲ್ಲಿ ತಪ್ಪಿದ್ದರೆ ಸರಿಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಇವತ್ತಿನ ದಿವಸ ಜನಸಂಖ್ಯೆ ಬೆಳೆಯುತ್ತಿದೆ. ಜನಸಂಖ್ಯೆ ಬೆಳೆದ ಹಾಗೆ ಅರ್ಧ ಫರ್ಲಾಂಗ್ ಕೂಡ ಜನರು ನಡೆಯುವ ಹಾಗೆ ಇಲ್ಲ. ಎಲ್ಲೇ ಆದರೂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಹೊಸ ಬಸ್ ರೂಟ್‌ಗಳನ್ನು ಅಪರೇಟ್ ಮಾಡಿದರೆ ಕೇವಲ ಒಂದೆರಡು ತಿಂಗಳೊಳಗೆ ಕಲೆಕ್ಷನ್ ಇಲ್ಲ, ಗಾಡಿಗಳನ್ನು ಸ್ಟಾಪ್ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅದೇ ಖಾಸಗಿಯವರಿಗೆ ಆ ರೀತಿ ತೊಂದರೆ ಬರುವುದಿಲ್ಲ. ಅಂದಾಗ ನಮ್ಮಲ್ಲಿ ತಪ್ಪೇನಿದೆ? ಕೆಲವು ಭಾಗಗಳನ್ನು ಖಾಸಗೀಕರಣ ಮಾಡುವುದರಿಂದ ಸಾರಿಗೆ ಸಂಸ್ಥೆಯ ನೌಕರರಲ್ಲಿ ತಪ್ಪಿದೆಯೇ ಎಂದು ನೋಡಿ ಸರಿಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ನಾವೇನು ಪೂರ್ಣವಾಗಿ ಖಾಸಗೀಕರಣ ಮಾಡುತ್ತಿಲ್ಲ. ಈ ರೀತಿ ಕಾಂಪಿಟಿಷನ್ ಆಗುವುದರಿಂದ ಸಾಕಷ್ಟು ನಾವು ಸಾರಿಗೆ ಸಂಸ್ಥೆಯನ್ನು ಸರಿಪಡಿಸುವುದಕ್ಕೆ, ಅಭಿವೃದ್ಧಿಪಡಿಸುವುದಕ್ಕೆ, ಆರ್ಥಿಕ ಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆಂಬ ನಂಬಿಕೆ ನನಗಿದೆ. ಇದರ ಜೊತೆಗೆ ಇದೇ ರೀತಿ ಕೈಗಾರಿಕಾ ಕ್ಷೇತ್ರದಲ್ಲಿ ಸಹ ಆಯ್ದ ಕೆಲವು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಏನಿವೆ, ಅವನ್ನು ಖಾಸಗೀಕರಣ ಮಾಡಬೇಕೆಂಬ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ. ಇದು ಉತ್ತಮವಾದ ನಿರ್ಧಾರ ಅನ್ನಿಸುತ್ತದೆ. ಎಷ್ಟೋ ಸಾರ್ವಜನಿಕ ಉದ್ದಿಮೆಗಳು ಲಾಸ್‌ನಲ್ಲಿ ನಡೆಯುತ್ತಿದೆ. ಅವನ್ನು ಖಾಸಗೀಯವರಿಗೆ ಕೊಟ್ಟು ಉತ್ತಮವಾಗಿ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಏಕೆಂದರೆ ನಾನೂ ಕೂಡ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯಲ್ಲಿ ಸದಸ್ಯೆಯಾಗಿ ಮೀಟಿಂಗ್‌ನಲ್ಲಿ ಭಾಗವಹಿಸಿ ಸಾರ್ವಜನಿಕ ಉದ್ದಿಮೆಗಳ ಲೋಪದೋಷಗಳ ಬಗ್ಗೆ ತಿಳಿದುಕೊಂಡಿದ್ದೇನೆ. ಉದಾಹರಣೆಗೆ, ಮೈಸೂರು ಎಲೆಕ್ಟ್ರಿಕಲ್ಸ್. ಅದು ಖಾಸಗಿಯಲ್ಲೇ ಇತ್ತು. ಅದನ್ನು ಶ್ರೀ ದೇವರಾಜ ಅರಸು ಅವರ ಕಾಲದಲ್ಲಿ ಸರ್ಕಾರ ವಹಿಸಿಕೊಂಡ ನಂತರ ಸರ್ಕಾರದ ಅಧೀನದಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ಅದು ಇವತ್ತು ಲಾಸ್‌ನಲ್ಲಿದೆ. ಮತ್ತೆ ಅದನ್ನು ಖಾಸಗೀ ಕರಣ ಮಾಡಬೇಕೆಂದು ಯೋಚಿಸಲಾಗುತ್ತಿದೆ ಎಂದು ತಿಳಿದುಬಂದಿದೆ. ಇದನ್ನು ನಾವು ಪುನಃ ಖಾಸಗೀಕರಣ ಮಾಡುವುದು ಸರಿಯಾದರೂ ಉಳಿದ ಸಾರ್ವಜನಿಕ ಉದ್ದಿಮೆಗಳೇನಿವೆ ಅವುಗಳು ನಷ್ಟದಲ್ಲಿದ್ದಾಗ ಅವು ನಷ್ಟ ಹೊಂದುವುದಕ್ಕೆ ಕಾರಣವೇನು, ಅದಕ್ಕೆ ಯಾರು ಜವಾಬ್ದಾರರು ಎಂಬುದನ್ನು ಕಂಡುಕೊಂಡು ನಾವು ನಷ್ಟಕ್ಕೆ ಕಾರಣಕರ್ತರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಜೊತೆಗೆ ಅಲ್ಲಿನ ಲೋಪದೋಷಗಳನ್ನು ಸರಿಪಡಿಸಿದರೆ ಮಾತ್ರ ಸಾರ್ವಜನಿಕ ಉದ್ದಿಮೆಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವೆಂದು ನನ್ನ ಅನಿಸಿಕೆ. ಇವತ್ತಿನ ದಿವಸ ಆಡಳಿತದಲ್ಲಿ ಸುಧಾರಣೆ ಮಾಡುವುದಕ್ಕೆ ಪಂಚಸೂತ್ರ ಬಿಲ್ ಮಾಡಿ ಅದರ ಬಗ್ಗೆ ಇಂದು ಜಂಟಿ ಸಲಹಾ ಸಮಿತಿಯಲ್ಲಿ ಸಲಹೆಗಳನ್ನು ಕೇಳಲಾಗುತ್ತಿದೆ. ಅದರ ಜೊತೆಗೆ ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡಬೇಕಾದರೆ, ಜನರಿಗೆ ಸರಿಯಾಗಿ ಕಾಯಿದೆ ಕಾನೂನುಗಳು, ಸರ್ಕಾರದ ಕಾರ್ಯಕ್ರಮಗಳು ಮುಟ್ಟುಬೇಕಾದರೆ ನಾವು ಬೇರೆ ವ್ಯವಸ್ಥೆ ಮಾಡಬೇಕೆಂಬ ದೃಷ್ಟಿಯಿಂದ ಅಪೀಲು ನ್ಯಾಯ ಮಂಡಲಿಗಳನ್ನು ಮಾಡಲು ಇವತ್ತು ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ. ಅಪೀಲು ನ್ಯಾಯ ಮಂಡಲಿಗಳಲ್ಲಿ ಜನರಿಗೆ ಆಗಿರುವ ಅನ್ಯಾಯಗಳನ್ನು ಕಂಡುಕೊಂಡು ಆ ಅನ್ಯಾಯಕ್ಕೆ ಕಾರಣಕರ್ತರಾದವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡರೆ ನಿಜವಾಗಿ ಬಡಜನರಿಗೆ ಸರಿಯಾದ ರೀತಿಯಲ್ಲಿ

ನ್ಯಾಯ ಸಿಗುತ್ತದೆ. ಮತ್ತು ಸರ್ಕಾರಿ ಅಧಿಕಾರಿಗಳು ಹತೋಟಿಯಲ್ಲಿರುತ್ತಾರೆಂದು ಸರ್ಕಾರ ಈ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

ಹಾಗೆಯೇ ಇನ್ನೊಂದು ಮುಖ್ಯವಾದ ಸಂಗತಿ ಎಂದರೆ ಹರಿಜನಗಿರಿಜನರ ಅಭಿವೃದ್ಧಿಗಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಂವಿಧಾನಾತ್ಮಕವಾಗಿ ಅನೇಕ ಕಾಯಿದೆ ಕಾನೂನುಗಳನ್ನು ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ಮಾಡಿದ್ದಾರೆ. ಆದರೆ ಇವತ್ತು ಏನಾಗಿದೆ ಎಂದರೆ ದಿನೇ ದಿನೇ ಹರಿಜನಗಿರಿಜನರ ಮೇಕಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಈಗಂತೂ ಸಾಮೂಹಿಕ ದೌರ್ಜನ್ಯ ಹೆಚ್ಚಾಗುತ್ತಿದೆ. ಹರಿಜನರ ಕೇರಿಗಳಿಗೆ ಬೆಂಕಿ ಹಚ್ಚುವುದಾಗಲೀ ಅಥವಾ ಸಾಮೂಹಿಕವಾಗಿ ಅವರನ್ನು ಕೊಚ್ಚಿಹಾಕುವುದಾಗಲೀ ಹಾಗೆಯೇ ಹರಿಜನರ ಜಮೀನುಗಳನ್ನು ಅಕ್ರಮವಾಗಿ ಒತ್ತುವರಿ ಮಾಡುವ ದೌರ್ಜನ್ಯಗಳಾಗಲೀ ದಿನೇ ದಿನೇ ಹೆಚ್ಚಾಗುತ್ತಿದೆ. ಇವರ ರಕ್ಷಣೆ ಮತ್ತು ಇದನ್ನೆಲ್ಲಾ ವಿಚಾರಣೆ ಮಾಡುವುದಕ್ಕೋಸ್ಕರ ಈಗ ಸರ್ಕಾರ ಹೊಸದಾಗಿ ಒಂದು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಒಂದು ಕಮಿಷನ್ ನೇಮಕ ಮಾಡುತ್ತಿರುವುದು ಅಭಿನಂದನಾರ್ಹ. ನಾನು ಅದಕ್ಕಾಗಿ ರಾಜ್ಯದ ಎಲ್ಲಾ ಹರಿಜನಗಿರಿಜನರ ಪರವಾಗಿ ಸರ್ಕಾರವನ್ನು ಮತ್ತು ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಯಾವುದೇ ಕಮಿಷನ್ ಅಥವಾ ಯಾವುದೇ ಆಯೋಗ ರಚನೆ ಮಾಡುವುದರಿಂದ ಮಾತ್ರ ಅಭಿವೃದ್ಧಿ ಸಾಧನೆಯಾಗುತ್ತದೆ ಅಥವಾ ನಿರೀಕ್ಷೆ ಮಾಡಿದಷ್ಟು ಮಟ್ಟದಲ್ಲಿ ಏಳಿಗೆಯಾಗುತ್ತದೆ ಎಂದು ನಾವು ನಂಬಿದರೆ ಸಾಲದು. ಆದರೆ ಇದನ್ನು ಅಷ್ಟೇ ಫೋರ್ಸ್ ಆಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರ ಮುಂದಾಗಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಹಾಗೆಯೇ ಹರಿಜನಗಿರಿಜನರಿಗೆ ರೋಸ್ಟರ್ ಜಾರಿಯಲ್ಲಿ ಅಥವಾ ರೋಸ್ಟರ್ ಪದ್ಧತಿಯನ್ನು ಜಾರಿಗೆ ತರುವಲ್ಲಿ ಏನು ಬ್ಯಾಕ್‌ಲಾಗ್ ಉಳಿದಿದೆ ಅದನ್ನು ಎಲ್ಲಾ ಗುರುತಿಸಿ ಎಲ್ಲಾ ಇಲಾಖೆಯಲ್ಲೂ ಎಲ್ಲಾ ಕೇಡರ್‌ನಲ್ಲೂ ಬ್ಯಾಕ್‌ಲಾಗ್‌ಗಳನ್ನು ಭರ್ತಿ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿರುವುದು ಮೆಚ್ಚುವಂಥ ಒಂದು ಸಂಗತಿ. ಆದರೆ ಇದನ್ನು ಹೀಗೆಯೇ ಹೇಳಿಕೊಂಡು ಬಂದರೆ ಖಂಡಿತ ಸಾಲದು. ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರ ಮುಂದಾಗಬೇಕೆಂದು ಹೇಳಿ ಈ ಸಭೆ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಹಾಗೆಯೇ ಎಸ್.ಸಿ.ಎಸ್.ಟಿ. ಪ್ರತಿಭಾವಂತ ಅಭ್ಯರ್ಥಿಗಳಿಗೆ ಡಿಗ್ರಿ ಮುಗಿಸಿದ ತಕ್ಷಣ ನಾವು ನೇರವಾಗಿ ಉದ್ಯೋಗ ಕೊಡುತ್ತೇವೆಂದು ಹಿಂದಿನ ಸರ್ಕಾರದವರು ಘೋಷಣೆ ಮಾಡಿದ್ದರು. ಆದರೆ ಇದುವರೆಗೂ ಅದು ಕಾರ್ಯಗತವಾಗಿಲ್ಲ ಘೋಷಣೆ ಕೇವಲ ಘೋಷಣೆಯಾಗಿ ಉಳಿಯಬಾರದು ಎಂದು ನಮ್ಮ ಸರ್ಕಾರ ತೀರ್ಮಾನ ಮಾಡಿ ಈ ಒಂದು ನೇರ ಆಯ್ಕೆಯನ್ನು ಮಾಡುತ್ತೇವೆ ಎಂಬ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿರುವುದು ಹೆಮ್ಮೆಯ ಸಂಗತಿ.

ಆದಷ್ಟು ಜಾಗ್ರತೆ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬಹುಮುಖ್ಯವಾದ ವಿಷಯ ಎಂದರೆ ಖಾಯಂ ಮಹಿಳಾ ಆಯೋಗ ಮಾಡುತ್ತೇವೆಂದು ಸರ್ಕಾರ ಹೇಳಿರುವುದು. ಅದಕ್ಕಾಗಿ ನಾವು ಎಲ್ಲಾ ಮಹಿಳೆಯರ ಪರವಾಗಿ ಸರ್ಕಾರವನ್ನು ಮತ್ತು ಮುಖ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ದಿನನಿತ್ಯ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಕಾನೂನು ಜಾರಿ ಮಾಡಿದರೂ ಸಹ ವರದಕ್ಷಿಣೆ ವಿರೋಧ ಕಾನೂನು, ಬಾಲ್ಯ ವಿವಾಹದ ವಿರೋಧ ಕಾನೂನುಗಳು ಸಾಕಷ್ಟು ಸರ್ಕಾರ ತಂದರೂ ಸಹ ಈ ದೇಶದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಕಡಿಮೆಯಾಗುತ್ತಿಲ್ಲ. ದಿನೇ ದಿನೇ ಹೆಚ್ಚಾಗುತ್ತಿದೆ. ಆಯೋಗ ನೇಮಕ ಮಾಡಿದ ತಕ್ಷಣ ನಮ್ಮ ಎಲ್ಲಾ ಈ ದೌರ್ಜನ್ಯಗಳು ಕಡಿಮೆಯಾಗುತ್ತದೆ, ಮಹಿಳೆಯರಿಗೆ ಅನ್ಯಾಯ ಸರಿಯಾಗುತ್ತದೆ.

ಎಂದು ನಾನು ನಂಬುವುದಿಲ್ಲ. ಆದರೆ ಇಷ್ಟಾದರೂ ನಮ್ಮ ಸರ್ಕಾರ ಮುಂದಾಗಿದೆ, ಮಹಿಳೆಯರ ಬಗ್ಗೆ ಆಸಕ್ತಿ ವಹಿಸಿ ಮಹಿಳೆಯರ ಕಷ್ಟಗಳನ್ನು ಅರ್ಥ ಮಾಡಿಕೊಂಡು ದೇಶದಲ್ಲಿ ಮಹಿಳೆಯರಿಗೆ ಸಮವಾದ ಪಾಲು ಇದೆ. ಅವರೂ ಸಹ ಪುರುಷರಂತೆ ಸಮಾನರು, ಸಮಾಜದಲ್ಲಿ ಅವರೂ ಸಮಾನವಾಗಿ ಬದುಕಬೇಕು ಎಂದು ಯೋಚನೆ ಮಾಡಿ ಈ ಆಯೋಗ ನೇಮಕ ಮಾಡಿರುವುದರ ಬಗ್ಗೆ ನಾನು ಅಭಿನಂದಿಸುತ್ತೇನೆ. ಇದರ ಜೊತೆಗೆ ಮಹಿಳೆಯರ ವಿದ್ಯಾಭ್ಯಾಸದ ಬಗ್ಗೆ ಸಹ ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿರುತ್ತಿತ್ತೇನೋ ಎಂದು ನನಗನ್ನಿಸುತ್ತದೆ.

ಏಕೆಂದರೆ ಇವತ್ತು ಮಹಿಳೆಯರಿಗೆ ಪುರುಷರಿಗಿಂತಲೂ ಓದು ಬಹಳ ಅಗತ್ಯವಾಗಿದೆ. ನಮ್ಮ ಸಮಾಜದಲ್ಲಿ ಏನಾಗಿದೆ ಎಂದರೆ, ತಂದೆತಾಯಿಗಳು ಗಂಡು ಮಗುವಾದರೆ ಅವನನ್ನು ಚೆನ್ನಾಗಿ ಓದಿಸಬೇಕೆಂದೂ, ಅವನ್ನು ವಂಶೋದ್ಧಾರಕನೆಂದೂ, ಅವನನ್ನು ಡಾಕ್ಟರ್, ಎಂಜಿನಿಯರ್, ಲಾಯರ್ ಮಾಡಿಸಬೇಕೆಂದು ಬಹಳ ಆಸಕ್ತಿ ವಹಿಸಿ ಓದಿಸುತ್ತಾರೆ. ಆದರೆ ಹೆಣ್ಣು ಮಗುವಾದರೆ ಏನೋ ಎಸ್.ಎಸ್.ಎಲ್.ಸಿ ವರೆಗೆ ಕಲಿಯಲಿ ಎಂದು ಕಲಿಸಿ ನಂತರ ವರ ಸಿಕ್ಕಿದರೆ ಮದುವೆ ಮಾಡಿದರೆ ಮಗಳಿಗೆ ನಾವು ಮಾಡುವ ಕರ್ತವ್ಯ ಮುಗಿಯಿತು ಎಂದು ಹೆಚ್ಚಿನ ತಂದೆತಾಯಿಗಳು ತಿಳಿದಿದ್ದಾರೆ. ಇಂತಹದ್ದರಿಂದಾಗಿ ಇವತ್ತು ಹೆಣ್ಣುಮಕ್ಕಳು ಹಿಂದೆ ಬಿದ್ದಿದ್ದಾರೆ. ಎಷ್ಟೋ ಹೆಣ್ಣುಮಕ್ಕಳ ಬದುಕಿನಲ್ಲಿ ತೊಂದರೆ ಆದಾಗ ಆಕೆ ತನ್ನ ಕಾಲ ಮೇಲೆ ತಾನು ನಿಲ್ಲುವುದಕ್ಕೆ ಆಗುತ್ತಾ ಇಲ್ಲ. ಈ ಒಂದು ಸಂದರ್ಭದಲ್ಲಿ ಹೆಣ್ಣುಮಗಳ ವ್ಯಾಸಂಗದ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಈ ಆಯೋಗದಲ್ಲಿ ಏನಾದರೂ ತೋರಿಸಿ ಅವಕಾಶ ಮಾಡಿಕೊಟ್ಟಿದ್ದರೆ ಚೆನ್ನಾಗಿತ್ತೆನಿಸುತ್ತದೆ. ಜೊತೆಗೆ ಸಾಕ್ಷರತಾ ಆಂಧೋಳನದ ಬಗ್ಗೆ ಚರ್ಚೆಯಾಗಿದೆ. ಸಾಕ್ಷರತಾ ಆಂದೋಲನ ಜಾರಿಗೆ ಬಂದಮೇಲೆ ಕೆಲವಾರು ಜಿಲ್ಲೆಗಳಲ್ಲಿ ನಿಜವಾಗಿಯೂ ಉತ್ತಮವಾದ ಕೆಲಸ ಮಾಡಿದ್ದಾರೆ. ಅದರಲ್ಲೂ ಮಂಗಳೂರು ಜಿಲ್ಲೆಯಲ್ಲಿ, ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಕೆಲಸ ಆಗಿದೆ. ಆದರೆ ನನಗೆ ಒಂದು ಎನಿಸುತ್ತದೆ. ವಯಸ್ಕರ ಶಿಕ್ಷಣ ನೀತಿಗೂ ಸಾಕ್ಷರತಾ ಆಂದೋಲನಕ್ಕೂ ಏನು ವ್ಯತ್ಯಾಸ ಎಂದು ಗೊತ್ತಾಗಲಿಲ್ಲ. ಸಾಕ್ಷರತಾ ಆಂದೋಲನದಲ್ಲಿ ತಾನೂ ಕಲಿತು ಮತ್ತೊಬ್ಬನಿಗೂ ಕಲಿಸು ಎಂದು ಇದೆ. ಇದರಲ್ಲಿ ನಾವೆಲ್ಲರೂ ನೂರಕ್ಕೆ ನೂರು ಸಿನಿಯರ್ ಆಗಿ ಕೆಲಸ ಮಾಡಿದರೆ ಒಳ್ಳೆಯ ಫಲಿತಾಂಶ ಬರುತ್ತದೆ. ಇದರಲ್ಲಿ ಎಷ್ಟು ಜನ ಚಿಂತನೆ ಮಾಡುತ್ತಾರೆ? ವಯಸ್ಕರ ಶಿಕ್ಷಣದಲ್ಲೇ ಕಲಿಯುತ್ತಿರುವವರಿಗೆ ದುಡ್ಡು ಕೊಟ್ಟು ಅರ್ಧ ಗಂಟೆ ಕಲಿಸಿ ಎಂದರೆ ಅದರಲ್ಲೇ ನಾವು ಮಾಡುವ ಸಾಧನೆ ಮಾಡುವುದಕ್ಕಾಗಿಲ್ಲ. ಇನ್ನು ಈ ರೀತಿಯ ಸಾಕ್ಷರತಾ ಆಂದೋಲನದಲ್ಲಿ ಇನ್ನು ಎಷ್ಟು ಜನ ಸ್ವತಃ ಹೋಗಿ ಪ್ರತಿಯೋಬ್ಬರೂ ಹೋಗಿ ಪ್ರತಿಯೊಬ್ಬ ಅನಕ್ಷರಸ್ಥರಿಗೆ ಅಕ್ಷರಸ್ಥರನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆನ್ನುವುದು ಮುಖ್ಯ ಮಂಗಳೂರು ಜಿಲ್ಲೆಯಲ್ಲಿ ಆಗಿದೆ ಆಗಿದೆ ಎಂದರೆ ಅದನ್ನು ನಾವು ಒಪ್ಪಬೇಕಾಗುತ್ತದೆ. ಏಕೆಂದರೆ ಮಂಗಳೂರು ಜಿಲ್ಲೆಯವರು ಕೆಲಸದಲ್ಲಿ ಬಹಳ ನಿಪುಣರು, ಜನ ಸಿನ್ಸಿಯರ್ ಇದ್ದಾರೆ. ಅವರು ಎಲ್ಲಾ ವಿಷಯದಲ್ಲೂ ಸಿನ್ಸಿಯರ್ ಆಗಿ ಕೆಲಸ ಮಾಡುತ್ತಾರೆ, ಕಾಳಜಿ ವಹಿಸುತ್ತಾರೆ. ಮತ್ತು ಆ ಭಾಗದಲ್ಲಿ ಹೆಚ್ಚು ವಿದ್ಯಾವಂತರು ಇರುವುದರಿಂದ ಮತ್ತು ಸಮರ್ಪಣಾ ಮನೋಭಾವ ಅವರಲ್ಲಿ ಇರುವುದರಿಂದ ಇಡೀ ಮಂಗಳೂರು ಜಿಲ್ಲೆಯಲ್ಲಿ ಸಾಕ್ಷರತೆ ಪೂರ್ಣ ಮಾಡುವುದಕ್ಕೆ ಆ ಕೆಲಸ ಮಾಡಿದರು ಎಂದರೆ ಒಪ್ಪಬೇಕಾದ ಸಂಗತಿ. ಆದರೆ ಕೆಲವು ಕಡೆ ಕಲಿಯಿರಿ ಮತ್ತು ಕಲಿಸಿರಿ ಎನ್ನುವ ಬ್ಯಾನರ್ ಮಾತ್ರ ನಾವು ನೋಡುತ್ತಿದ್ದೇವೆ. ಇದರಲ್ಲಿ ನಾವು ಸಾಕಷ್ಟು ಸ್ವಪ್ರೇರಣೆಯಿಂದ ನಮ್ಮನ್ನು ನಾವು ತೊಡಗಿಸಿಕೊಂಡರೆ ಮಾತ್ರ ನಿಜವಾಗ ಯಶಸ್ವಿಯಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ.

ಈ ಬಗ್ಗೆ ಎಲ್ಲಾರೂ ಮಾನ್ಯ ಸದಸ್ಯರು ಪ್ರಯತ್ನ ಮಾಡಬೇಕು. ಆ ಪ್ರಯತ್ನವನ್ನು ಈ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದರೆ ಈ ಸಾಕ್ಷರತಾ ಆಂಧೋಲನ ಚೆನ್ನಾಗಿ ಆಗುತ್ತದೆ. ಹಾಗೂ ಇದಕ್ಕೆ ಒಂದು ಅರ್ಥ ಬರುತ್ತದೆ ಎಂದು ನಾನು ಹೇಳುತ್ತೇನೆ. ಮಾನ್ಯ ಕೋಳೀವಾಡ್ ಅವರು ಒಂದು ಹೆಜ್ಜೆ ಮುಂದೆ ಹೋಗಿ ಒಂದು ಮಾತನ್ನು ಹೇಳಿದರು. ಈ ಒಂದು ಕಾನೂನಿಗೆ ಮೊರೆ ಹೋದ ಜನರ ಪರಿಸ್ಥಿತಿ ಹೇಗಾಗಿದೆ ಎಂದರೆ, ಗೆದ್ದವನು ಸೋತ ಸೋತವನು ಸತ್ತ ಎಂದು ಹೇಳಿದರು. ಅದು ಹೇಗೆ ಎಂದು ಅವರು ಹೇಳಿದರು. ಅದು ನಿಜವಾಗಿಯೂ ಮೆಚ್ಚುವ ವಿಷಯ. ಎಷ್ಟೋ ವರ್ಷಗಳಿಂದ ಕೋರ್ಟಿಗೆ ಹೋಗಿ ಪೆಂಡಿಂಗ್ ಇರುವ ಕೇಸ್‌ಗಳು ಜಾಸ್ತಿ ಇವೆ.

ಅದರ ಬಗ್ಗೆ ನೀವು ವಿಚಾರ ಮಾಡಿ. ಈಗಾಗಲೇ ಸರ್ಕಾರ 164 ಲೋಕ ಅದಾಲತ್‌ಗಳನ್ನು ಸ್ಥಾಪನೆ ಮಾಡಿದೆ. ಇನ್ನು ಹೆಚ್ಚಿಗೆ ಲೋಕ ಅದಾಲತ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಮುಂದಾಗಿದೆ. ಅದಕ್ಕೆ ನಾವು ಬೆಂಬಲ ಕೊಡಬೇಕಾಗಿದೆ ಅದನ್ನು ಅಪ್ರಿಶಿಯೇಟ್ ಮಾಡಬೇಕಾಗುತ್ತದೆ. ಇಂತಹ ಉತ್ತಮ ಕಾರ್ಯಕ್ರಮವನ್ನು ರಾಜ್ಯಕ್ಕೆ ನಮ್ಮ ಸರ್ಕಾರ ನೀಡಿದೆ. ಹಾಗಾಗಿ ಈ ರಾಜ್ಯದ ಎಲ್ಲಾವರ್ಗದ ಜನರು ಬಡ ಜನರು ಈ ಸರ್ಕಾರದ ಕಾರ್ಯಕ್ರಮಗಳನ್ನು ಒಪ್ಪುತ್ತಾರೆ ಮತ್ತು ಇದಕ್ಕೆ ಪ್ರೋತ್ಸಾಹ ಕೊಡುತ್ತಾರೆಂದು ಹೇಳಿ ನಾನು ನಂಬಿದ್ದೇನೆ. ಇದಕ್ಕೆ ವಿರೋಧಪಕ್ಷದವರ ಬೆಂಬಲವೂ ಸಹ ಬೇಕು ಎಲ್ಲ ಸದಸ್ಯರ ಬೆಂಬಲ ಬೇಕು ಈ ಎಲ್ಲ ಕಾರ್ಯಕ್ರಮಗಳನ್ನು ಮುಗಿಸುವುದಕ್ಕೆ ಎಂದು ಹೇಳಿ ಮಾನ್ಯ ಉಪಾಧ್ಯಕ್ಷಿಣಿಯವರು ಕಿರಿಯಳಾದ ನನಗೆ ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಅನುಮೋದನೆ ಮಾಡುವುದಕ್ಕೆ ಅವಕಾಶಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Madam Deputy Speaker : Now, to move the amendments. prof. Nanjunda Swamy - Hon. Member absent. Next Sri P.G.R. Scindhia to move, the amendment.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಕೆಳಕಂಡ ಪ್ರಸ್ತಾವವನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಬೇಕೆಂದು ಈ ತಿದ್ದುಪಡಿಯನ್ನು ನಾನು ಸೂಚನೆ ಮಾಡುತ್ತೇನೆ. ಪ್ರಸ್ತಾವ ಹೀಗಿದೆ.

"ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯ ಬಗ್ಗೆ ಪ್ರಸ್ತಾವ ಇಲ್ಲದಿರುವುದು ಜನಸಾಮಾನ್ಯರು ಬೆಲೆಗಳ ಏರಿಕೆಯಿಂದ ತತ್ತರಿಸುತ್ತಿರುವ ಪ್ರಸ್ತಾವ ಇಲ್ಲದಿರುವುದು ಅತ್ಯಂತ ಖೇದದ ವಿಚಾರ"

(question was proposed)

ಶ್ರೀ ಹೆಚ್. ಏಕಾಂತಯ್ಯ : ನಾನೊಂದು ಅಮೆಂಡ್‌ಮೆಂಟ್ ಕಳುಹಿಸಿದ್ದೇನೆ.

ಉಪಾಧ್ಯಕ್ಷರು : ತಾವೊಂದು ಅಮೆಂಡ್‌ಮೆಂಟ್ ಕಳುಹಿಸಿದ್ದೀರಿ ಆದರೆ ನಿನ್ನೆಯೇ ಕೊನೆಯ ದಿವಸವಾದ್ದರಿಂದ ಅದು ರಿಜೆಕ್ಟ್ ಆಗಿದೆ.

ಶ್ರೀ ಹೆಚ್. ಏಕಾಂತಯ್ಯ : ನಾವು ಮೋಷನ್ ಆಫ್ ಥ್ಯಾಂಕ್ಸ್‌ಗೆ ಅಮೆಂಡ್‌ಮೆಂಟ್ ಕಳುಹಿಸಬೇಕಾದರೆ, ಮೊಟ್ಟ ಮೊದಲನೆಯದಾಗಿ ಮೋಷನ್ ಆಫ್ ಥ್ಯಾಂಕ್ಸ್ ಸರ್ಕ್ಯುಲೇಟ್ ಆಗಬೇಕು ಆಮೇಲೆ ಬುಲೇಟಿನ್‌ನಲ್ಲಿ ಬರಬೇಕು. ಅದು ಬರದೆ ನೀವು ಟೈಮ್‌ನ್ನು ಫಿಕ್ಸ್ ಮಾಡಿರುವುದು ಸರಿಯೇ? ನಿನ್ನೆ ಸಾಯಂಕಾಲ

ಬುಲೇಟಿನ್‌ನಲ್ಲಿ ಕಳುಹಿಸಿ ಪ್ರತಿಯೊಂದು ಸಂದರ್ಭದಲ್ಲಿಯೂ ಸಹ ಬುಲೇಟಿನ್ ಬಂದ ದಿವಸ ಲಾಸ್ಟ್ ಡೇಟ್ ಇರುತ್ತದೆ. ಆದ್ದರಿಂದ ನಾನು ಕೊಟ್ಟಿರುವ ಅಮೆಂಡ್‌ಮೆಂಟ್ ಏನಿದೆ ಅದು ಸರಿಯಾಗಿದೆ. It is in order. Therefore, it should be allowed.

ಶ್ರೀ ಡಿ.ಬಿ. ಚಂದ್ರೇಗೌಡ : ನಿನ್ನೆ ಸಭೆ ಅಡ್ಜರ್ನ್ ಆಗಿರುವುದರಿಂದ

ಉಪಾಧ್ಯಕ್ಷರು : ಬುಲೇಟಿನ್ ಹೊರಡಿಸಿದ್ದರು.

ಶ್ರೀ ಹೆಚ್. ಏಕಾಂತಯ್ಯ : ಬುಲೇಟಿನ್ ಹೊರಡಿಸಿದ್ದರು ಅದಕ್ಕೆ ಬ್ಲಿದಲಾಗಿ ಕೊಡುವುದಕ್ಕೆ ಬರುತ್ತದೆ. ಅದು ಪ್ರಶ್ನೆಯಲ್ಲ. ಮೋಷನ್ ಆಫ್ ಥ್ಯಾಂಕ್ಸ್ ಆರ್ಡರ್‌ನಲ್ಲಿದೆ. ಶ್ರೀ ಕೆ.ಬಿ. ಕೋಳಿವಾಡ್‌ರವರು ಸೂಚಕರು ಮೋಟಮ್ಮನವರು ಅನುಮೋದಕರು ಅದು ಆರ್ಡರ್‌ನಲ್ಲಿದೆ. ನಮಗೆ ಸರ್ಕ್ಯುಲೇಟ್ ಆಗಿದೆ. We will have a right, not otherwise. ನಾವು ಕಳುಹಿಸಿದ ಅಮೆಂಡ್‌ಮೆಂಟನ್ನು, ಮೋಷನ್ ಆಫ್ ಥ್ಯಾಂಕ್ಸ್ ಬಾರದೆ ನಾನು ಅಮೆಂಡ್‌ಮೆಂಟ್ ಕಳುಹಿಸಬೇಕೇ? ತಾವೇ ಹೇಳಿ, ಇದು ವಿಪರ್ಯಾಸ. It is in order. I request the Chair to permit me to move the amendment.

ಶ್ರೀ ಕೆ.ಹೆಚ್. ರಂಗನಾಥ್ : ರಾಜ್ಯಪಾಲರ ಭಾಷಣಕ್ಕೆ ತಾವು ಅಮೆಂಡ್‌ಮೆಂಟ್ ಕಳುಹಿಸುವುದಾದರೆ ಓದಿದ ತಕ್ಷಣ ತಾವು ಕಳುಹಿಸಬೇಕು.

ಶ್ರೀ ಹೆಚ್. ಏಕಾಂತಯ್ಯ : ನಾನು ಅಮೆಂಡ್‌ಮೆಂಟ್ ಕಳುಹಿಸಬೇಕಾದದ್ದು ರಾಜ್ಯಪಾಲರ ಭಾಷಣಕ್ಕಲ್ಲ. ಅಮೆಂಡ್‌ಮೆಂಟ್ ಕಳುಹಿಸಿರುವುದು to the Motion of thanks moved by the Hon. Members Sri Koliwad and Smt. Motamma, not for the Governor's Address. This is an amendment to the Motion of thanks; amendment to the Motion of thanks move by the Hon. Members.

ಉಪಾಧ್ಯಕ್ಷರು : ಗೌರ್ನರ್ ಅಡ್ರೆಸ್ ಮೇಲೆ ಮೋಷನ್ ಆಫ್ ಥ್ಯಾಂಕ್ಸ್ ಮೂವ್ ಮಾಡಿರುವುದರಿಂದ ಅದನ್ನು ಸರ್ಕ್ಯುಲೇಟ್ ಮಾಡಬೇಕಾಗಿಲ್ಲ. ಮಾನ್ಯ ಸಿಂಧ್ಯಾರವರು ಕಳುಹಿಸಿದ್ದಾರೆ ಅದನ್ನು ಅಕ್ಸೆಪ್ಟ್ ಮಾಡಿಕೊಂಡಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ತಮ್ಮ ರೂಲಿಂಗ್‌ಗೆ ನನ್ನ ತಕರಾರು ಇಲ್ಲ. ಮೋಷನ್ ಆಫ್ ಥ್ಯಾಂಕ್ಸ್ ಆರ್ಡರ್‌ನಲ್ಲಿದೆಯೆಂದು ಹೇಳಿ ಅದನ್ನು ಸರ್ಕ್ಯುಲೇಟ್ ಮಾಡುವುದಕ್ಕೆ ಮುಂಚೆ ನೀವು ಅಮೆಂಡ್‌ಮೆಂಟ್‌ಗೆ ಕಾಲವನ್ನು ಗೊತ್ತುಮಾಡುವುದು ಸರಿಯೆ?

ಉಪಾಧ್ಯಕ್ಷರು : ಮೋಷನ್ ಆಫ್ ಥ್ಯಾಂಕ್ಸ್‌ನ್ನು ಗೌರ್ನರ್ ಅಡ್ರೆಸ್ ಮೇಲೆ ಮೂವ್ ಮಾಡಿರುವುದರಿಂದ ಅದನ್ನು ಸರ್ಕ್ಯುಲೇಟ್ ಮಾಡುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಹಾಗೆ ಇಲ್ಲ, ದಯವಿಟ್ಟು ಕ್ಷಮಿಸಿ. ನಾನು ಬೇಕಾದರೆ ಓದಿ ಹೇಳಿ ಅಂದರೆ ಹೇಳುತ್ತೇನೆ. ಮೋಷನ್ ಆಫ್ ಥ್ಯಾಂಕ್ಸ್ ಆರ್ಡರ್‌ನಲ್ಲಿದೆಯೆಂದು ಹೇಳಿ ನಮಗೆ ಸರ್ಕ್ಯುಲೇಟ್ ಮಾಡಬೇಕು. ಬುಲೇಟಿನ್‌ಗೆ ಕಳುಹಿಸಬೇಕು ಆಮೇಲೆ we will have a right to move the amendment, not otherwise. Shall I anticipate and send the amendment?

ಶ್ರೀ ಕೆ.ಹೆಚ್. ರಂಗನಾಥ್ : ತಾವು May's Parliamentary Procedure ಪುಸ್ತಕ ನೋಡಿ.

ಶ್ರೀ ಹೆಚ್. ಏಕಾಂತಯ್ಯ : ಅದರಲ್ಲಿ ಏನೂ ಅನುಮಾನವಿಲ್ಲ. ಅದನ್ನು ನೋಡಿ ಹೇಳುತ್ತೇನೆ. ಏಕೆಂದರೆ, It shall be an amendment to the Motion of

thanks moved by the Hon. Members. Are we sending an amendment to the Governor's Address ?

ಶ್ರೀ ಕೆ.ಹೆಚ್. ರಂಗನಾಥ್ : ಗೌರ್ನರ್ ಅಡ್ರಸ್ ಮೇಲೆ ಮೋಷನ್ ಆಫ್ ಥ್ಯಾಂಕ್ಸ್ ಮೂವ್ ಆದಮೇಲೆ, ಅದರ ಮೇಲೆ ಡಿಸ್‌ಕಷನ್ ಆಗುವಾಗ ತಾವು ಕಳುಹಿಸಿದ ಅಮೆಂಡ್‌ಮೆಂಟ್ ಒಪ್ಪುವುದಕ್ಕಾಗುವುದಿಲ್ಲ, ತಾವು ಮೊದಲೇ ಕಳುಹಿಸಬೇಕಾಗುತ್ತದೆ.

ಉಪಾಧ್ಯಕ್ಷರು : ಮಾನ್ಯ ಸಿಂಧ್ಯಾರವರು ಕಳುಹಿಸಿದ ಅಮೆಂಡ್‌ಮೆಂಟ್‌ನ್ನು ಅಕ್ಸೆಪ್ಟ್ ಮಾಡಿದ್ದೇವೆ.

ಶ್ರೀ ಎಚ್. ಏಕಾಂತಯ್ಯ : ನಾವು ಕೇಲುತ್ತಿರುವುದು ಗರ್ವನರ್ ಅಡ್ರೆಸ್‌ಗೆ ಅಮೆಂಡ್‌ಮೆಂಟ್ ಅಲ್ಲ, ಏನು ವಂದನಾನಿರ್ಣಯ ಪ್ರಸ್ತಾವ ಇದೆ, ಆ ನಿರ್ಣಯಕ್ಕೆ ಅಮೆಂಡ್‌ಮೆಂಟ್ ನಾವು ಕಳುಹಿಸುತ್ತಿರುವುದು.

SRI D.B. CHANDRE GOWDA : Madam Deputy Speaker, may I read the Circular. It reads :

"Rule 20 and 21 of the Rules of Procedure and Conduct of Business in the Karnataka Legislature Assembly provides for a Motion of Thanks to the Governor's Address being moved by a Member and seconded by another Member. The Hon'ble Speaker has been pleased to fix 12-00 Noon on Saturday 22nd February 1992 as the last hour and date for receipt of a notice of the Motion and 11.00 A.M. on Monday...

The amendment can be moved only after the motion is moved by a Member not on the Governor's Address itself. The Motion of Thanks now being moved by a Member and seconded by another Member.. ಅವರು ಮೋಷನ್ ಮೂವ್ ಮಾಡಿದಮೇಲೆ ಅಮೆಂಡ್‌ಮೆಂಟ್‌ನ್ನು ನಾವು ಕಳಿಸಬೇಕು. ಅದು ಪ್ರಾಕ್ಟೀಸ್ ಇರುವುದು.

ಶ್ರೀ ಎಚ್. ಏಕಾಂತಯ್ಯ : ಅದನ್ನು ನಿನ್ನೆ ಬೆಳಿಗ್ಗೆಯೇ ಕಳಿಸಬೇಕಾಗಿತ್ತು ಎಂದು ಹೇಳುತ್ತಾರೆ. ಆಲ್‌ರೈಟ್, ಅವತ್ತು ಮನೆ ಇರಲಿಲ್ಲವೆಂದು ಇಟ್ಟುಕೊಳ್ಳಿ..

ಶ್ರೀ ಡಿ.ಬಿ. ಚಂದ್ರೇಗೌಡ : ಅವತ್ತು ಕಂಡೋಲನ್ಸ್ ರೆಸ್ಯುಲೇಷನ್ ಇದ್ದುದರಿಂದ..

MADAM DEPUTY SPEAKER : This is the convention that is followed... ನಿನ್ನೆ ಅಬೆಚುಯರಿ ರೆಫರೆನ್ಸ್ ಬಂದಿದ್ದರಿಂದ ಈ ಪ್ರಶ್ನೆ ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಇಲ್ಲಿ ಶುಕ್ರವಾರವೇ ನಮ್ಮ ಸಂತಾಪ ಸೂಚಕ ನಿರ್ಣಯ ಮಾಡಿ ಸೋಮವಾರ ಅಡ್ಜರ್ನ್ ಮಾಡಬೇಕೆಂದು ಆಲೋಚನೆ ಇತ್ತು. ಆದರೆ ಅದು ಸರಿಯಾದ ಕ್ರಮ ಅಲ್ಲವೆಂದು ಆಯಿತು. ರಾಜ್ಯ ಸಭೆ ಮತ್ತು ಲೋಕಸಭೆಯಲ್ಲಿ ರಾಷ್ಟ್ರ ಪತಿಯವರ ಭಾಷಣ ಆದಮೇಲೆ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿ ಸಭೆ ಮುಂದಕ್ಕೆ ಹೋಗಿದೆ. ಆದರೆ ಇಲ್ಲಿ ನಮ್ಮ ಸದನದಲ್ಲಿ ಇರತಕ್ಕಂಥ ಸಂಪ್ರದಾಯವನ್ನು ಪರಿಪಾಲನೆ ಮಾಡತಕ್ಕಂಥ ದೃಷ್ಟಿಯಿಂದ ಅವತ್ತು ನಾವು ಒಪ್ಪಿಕೊಂಡೆವು. ಸಂತಾಪಸೂಚಕ ನಿರ್ಣಯ ಇದ್ದಾಗ ಬೇರೆ ಯಾವುದೇ ನಿರ್ಣಯವನ್ನು ಸದನದಲ್ಲಿ ಕಳಿಸತಕ್ಕದ್ದು ಸಂಪ್ರದಾಯವಲ್ಲ, ಆದ್ದರಿಂದ ಕಳಿಸಲಿಲ್ಲ, ಈ ಕಾರಣದಿಂದ ಇದನ್ನು ಒಂದು ವಿಶೇಷ ಪರಿಸ್ಥಿತಿ ಎಂದು ಗಮನದಲ್ಲಿಟ್ಟುಕೊಂಡು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

MADAM DEPUTY SPEAKER : I would like to bring to the notice of the House from Kaul & Shakdar. It is at page 174. It reads :

"The discussion on the Motion is initiated by the proposer of the Motion, who is followed by the seconder. The Members who have tabled amendments are then asked to indicate their intention to move the amendments standing in their names and such of the amendments as are selected by the members are taken as moved and an announcement to that effect is made by the Speaker..."

SRI D.B. CHANDRE GOWDA : Moved when?

MADAM DEPUTY SPEAKER : Members who have tabled..

SRI D.B. CHANDRE GOWDA : He has tabled the amendment before the House met...

MADAM DEPUTY SPEAKER : He has not tabled within the specified time..

SRI H. ENANTHAIAH : When it is ascertained.I When it is circulated... ಅದು ಬರದೇ ಕೊಡಬೇಕೆಂದರೆ ಹೇಗೆ ? ವಂದನಾನಿರ್ಣಯದ ಬಗ್ಗೆ ನಿನ್ನೆ ರಾತ್ರಿ ನೋಟೀಸ್ ಬಂದಿರುವುದರಿಂದ ನೀವು ಟೇಬಲ್ ಮಾಡಿ ಆದಮೇಲೆಯೇ ಕೊಡಬೇಕೇ ಹೊರತು ಮೊದಲೇ ಕೊಡುವುದಕ್ಕೆ ಸಾಧ್ಯವಿಲ್ಲ. ಆದಕಾರಣ ವಿಶೇಷವಾದ ಕಾರಣ ನಿನ್ನೆ ದಿವಸ ಇದ್ದುದರಿಂದ ದಯವಿಟ್ಟು ನನಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷಿಣಿಯವರು : ಈಗ ನೀವು ಏನು ಅಮೆಂಡ್‌ಮೆಂಟ್ ಕಳಿಸಿದ್ದೀರಿ. ಅದನ್ನು ನಿರ್ಧಿಷ್ಟ ಅವಧಿಯಲ್ಲಿ ಬಂದಿಲ್ಲವೆಂದು ಮಾನ್ಯ ಸ್ಪೀಕರ್ ಅವರು ರಿಜೆಕ್ಟ್ ಮಾಡಿ ಬಿಟ್ಟಿದ್ದಾರೆ.

So, I don't think we can go back..

Now, I call upon the Leader of the Oppostion to speak on the Governor's Address.

SRI D.B. CHANDRE GOWDA : In the Business Advisory Committee we have agreed the House shall not sit beyond 5 clock. I will speak tomorrow.

MADAM DEPUTY SPEAKER : The House now stands adjourned to meet tomorrow at 11.oo A.M.

(ಸದನವು 5 ಗಂಟೆ 15 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 26ನೇ ಫೆಬ್ರುವರಿ ಮಾಹೆ 1992ರ ಬುಧವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)